ಸುಶೀಲಾ ಪ್ರಕಾಶನದ 15ನೇ ಪುಷ್ಪ

॥ ಶ್ರೀ ಮೂಲರಾಮೋ ವಿಜಯತೇ ॥

ಶ್ರೀ ದಿಗ್ವಿಜಯ ರಾಮೋ ವಿಜಯತೇ

ವೀರಚೋಳಪುರಾಧೀಶ

ಶ್ರೀ ಶ್ರೀ ಸತ್ಯನಾಥತೀರ್ಥರು



ಲೇಖಕರು : ಎಸ್.ಕೆ. ಬದರೀನಾಥ್

ಸುಶೀಲಾ ಪ್ರಕಾಶನ

52–1 (71–1), ಗಾಂಧೀಬಜಾರ್,

ಬೆಂಗಳೂರು–560 004. ✆ : 2667 4242

ಅರಿಕೆ

ಮಹಾಮಹಿಮಾರಾದ **ಶ್ರೀ ಸತ್ಯನಾಥ ತೀರ್ಥರ** ಬಗ್ಗೆ ಬರೆದಿರುವುದು ಅವರ ಅಪಾರವಾದ ಕರುಣೆ ಹಾಗೂ, ನನ್ನ ಕುಲಗುರುಗಳಾದ **ಶ್ರೀ ಸತ್ಯಪರಾಯಣರ** ಅನುಗ್ರಹ. ಮಿಗಿಲಾಗಿ ಬುದ್ಧಿ ಬಂದಾಗಿನಿಂದಲೂ **ಪೂಜೆ ಮಾಡುತ್ತಿರುವ ಶ್ರೀ ಸೀತಾರಾಮನ ದಯೆಯಷ್ಟೆ. ಕುಬ್ಜನೊಬ್ಬ ಬೃಹದ್ಧಿಮಾಲಯವನ್ನು** ಹತ್ತಲು ಪ್ರಯತ್ನಪಟ್ಟಂತೆ ಈ ಸಣ್ಣ ಹೊತ್ತಿಗೆಯನ್ನು ಬರೆಯಲು ವಿವಿಧ ಆಕರಗಳಿಂದ ವಿಷಯವನ್ನು ಪಡೆದು, ಸಂಗ್ರಹಿಸಿ ಬರೆದಿದ್ದೇನೆ. ಬಳಸಿಕೊಂಡಿರುವ ಗ್ರಂಥಗಳ ಗ್ರಂಥಕರ್ತರಿಗೆ ಋಣಿ. ಶ್ರೀ ಸತ್ಯನಾಥರ ದಿವ್ಯ ಚರಿತ್ರೆಯನ್ನು ಓದಿ ಅದರಿಂದ ಪ್ರಭಾವಿತರಾಗಿ ಅವರ ಬೃಂದಾವನ ದರ್ಶನ, ಪೂಜೆ, ಅವರ ಗ್ರಂಥ ಅಧ್ಯಯನ, ಸೇವೆಯನ್ನು ಈ ಹೊತ್ತಿಗೆಯನ್ನು ಓದಿದವರು ಕೈಗೊಂಡರೆ ಈ ಅಲ್ಪನ ಕಾರ್ಯ ಸಾರ್ಥಕವಾಗುತ್ತೆ.

ನಾನು ಬರೆದಿರುವ ಪುಸ್ತಕಗಳಿಗೆ ತಮ್ಮ ವಿದ್ವತ್ಪೂರ್ಣವಾದ **ಮುನ್ನುಡಿಯನ್ನು** ದಯಪಾಲಿಸಿರುವ ನನ್ನ ವಿದ್ಯಾ ಗುರುಗಳು **ಪ್ರಕಾಂಡ ಪಂಡಿತರು, ಪ್ರಚಂಡ ವಾಗ್ಮಿಗಳು,** ಆದ ಪಂಡಿತ **ಶ್ರೀ ಸತ್ಯ ಧ್ಯಾನಾಚಾರ್ಯ ಕಟ್ಟಿಯವರು** ಈ ಪುಸ್ತಕಕ್ಕೂ ನನ್ನ ಮೇಲೆ ಕರುಣಾ ಪ್ರವಾಹವನ್ನು ಹರಿಸಿ ಮುನ್ನುಡಿಯನ್ನು ದಯಪಾಲಿಸಿದ್ದಾರೆ. ಅವರ ಚರಣಾರವಿಂದಗಳಲ್ಲಿ ಸಾಷ್ಟಾಂಗ ಪ್ರಣಾಮಗಳು. ಸ್ವಪ್ರೇರಣೆಯಿಂದ ಧನದ ನೆರವನ್ನಿತ್ತ ನನ್ನ **ತಮ್ಮ ಚಿ|| ಫಣೀಂದ್ರನಾಥನಿಗೆ** ಸನ್ಮಂಗಳವನ್ನೀಯಲಿ.

ನನ್ನ ಎಲ್ಲಾ ಕಾರ್ಯಗಳಿಗೂ ಒತ್ತಾಸೆಯಾಗಿ ನಿಂತಿರುವ ನನ್ನ ಪತ್ನಿ **ಸುಮನಾ ಬದರೀನಾಥಳಿಗೆ** ಆಶೀರ್ವಾದಗಳು. ತಾನು ಬದುಕಿದ್ದಾಗಲೂ ಈಗಲೂ ದಾರಿದೀಪವಾಗಿ ನನ್ನನ್ನು ಮುನ್ನಡೆಸುತ್ತಿರುವ ನನ್ನ ಮಾತೆ **ಶ್ರೀಮತಿ ನಾಗಮ್ಮನ (ಶ್ರೀ ಎಸ್.ಬಿ. ಕೃಷ್ಣಮೂರ್ತಿಯವರ ಧರ್ಮಪತ್ನಿ ಸುಶೀಲಾ ಬಾಯಿ)** ದಯೆಯಿಂದಲೇ ಈ ಕೃತಿ ಮೈದೊಳೆಯಿತು.

ಶ್ರೀ ಸತ್ಯಪರಾಯಣರನ್ನು ನಂಬೋಣ ಸನ್ಮಂಗಲವನ್ನು ಪಡೆಯೋಣ.

52/1, (71–1) ಗಾಂಧಿಬಜಾರ್,
ಬೆಂಗಳೂರು–560 004. ದೂ.: 26674242.
15–02–2007 **ಎಸ್.ಕೆ. ಬದರೀನಾಥ್**

||ಶ್ರೀ ದಿಗ್ವಿಜಯರಾಮೋ ವಿಜಯತೇ ||

ಮುನ್ನುಡಿ

ಪ್ರಾತಃ ಸ್ಮರಣೀಯರಾದ ಶ್ರೀ ಸತ್ಯನಾಥರು ಮಾಧ್ವ ವಾಙ್ಮಯದಲ್ಲಿ ತಮ್ಮದೇ ಆದ ವಿಶಿಷ್ಟವಾದ ಸ್ಥಾನವನ್ನು ಕಲ್ಪಿಸಿಕೊಂಡಿದ್ದಾರೆ. ಪ್ರಖರ ಪಾಂಡಿತ್ಯ, ಆಳವಾದ ವಿಚಾರ ಪ್ರತಿಪಾದನೆ, ವಿಷಯ ವಿಮರ್ಶೆ ಇವರ ಗ್ರಂಥಗಳ ವೈಶಿಷ್ಟ್ಯ. ತಮ್ಮ ಧೃಡ ಸಂಕಲ್ಪದಿಂದ ಮಾಯಾವಾದವನ್ನು ಖಂಡಿಸಲು ಯುದ್ಧವನ್ನೇ ಸಾರಿರುವುದು ಅವರ ಗ್ರಂಥಗಳಿಗೆ ''ಪರಶು'', ''ಅಭಿನವಗಧಾ'' ಎಂದು ಹೆಸರಿಸಿರುವುದೇ ಸಾಕ್ಷಿ. ವಿಪಕ್ಷಿಯರು ಮಾಡಬಹುದಾದ ಆಕ್ಷೇಪಗಳನ್ನು ಊಹಿಸಿ ತಾವೇ ನಿರಾಕರಿಸುತ್ತಿದ್ದರು.

ಶ್ರೀ ಸತ್ಯನಾಥತೀರ್ಥರಿಗೆ ಅವರ ಗುರುಗಳಾದ ಶ್ರೀ ಸತ್ಯನಿಧಿ ತೀರ್ಥರಲ್ಲಿ ಅಪಾರ ಭಕ್ತಿ ತಮ್ಮ ಮೇರು ಕೃತಿಯಾದ ಅಭಿನವ ಚಂದ್ರಿಕಾದಲ್ಲಿ **''ಭಕ್ತ್ಯಾ ನಮಾಮಿತಂ ಸತ್ಯನಿಧಿಂ ಲೋಕಗುರುಂಮುದೇ''** ಎಂದಿದ್ದಾರೆ. ತಮ್ಮ ಯೋಗ ದೃಷ್ಟಿಯಿಂದ ತಮ್ಮ ಕೊನೆಯನ್ನು ತಿಳಿದ ಇವರು ವಿಷ್ಣು ದೂತರು ಕರೆದೊಯ್ಯಲು ಬರಲು ತಮ್ಮ ಗುರುಗಳ ಆರಾಧನೆಯನ್ನು ಮಾರ್ಗಶೀರ್ಷ ದಶಮಿಯಂದು ಮುಗಿಸಿ, ಏಕಾದಶಿ ಬರುವುದಾಗಿ ಹೇಳಿ ತಮ್ಮ ಮೃತ್ಯುವನ್ನು ಮುಂದೂಡಿದ ಯತಿವರೇಣ್ಯರು.

ಮಹಿಮಾನ್ವಿತರಾದ ಶ್ರೀ ಸತ್ಯನಾಥತೀರ್ಥರ ದಿವ್ಯ ಚರಿತ್ರೆಯನ್ನು **ನನ್ನ ಪ್ರೀತಿಯ ಎಸ್.ಕೆ. ಬದರೀನಾಥ್** ಅನೇಕ ಆಕರಗಳಿಂದ ಸಂಗ್ರಹಿಸಿ ಹೊರ ತಂದಿದ್ದಾರೆ. ಈಗಾಗಲೇ ಅನೇಕ ಹೊತ್ತಿಗೆಗಳನ್ನು ಕಂಡಿರುವ ಇವರ ಈ ಕೃತಿ ಸಜ್ಜನರ ಕೈ ಸೇರಿ, ಇವರ ಪ್ರಯತ್ನ ಸಫಲವಾಗಲಿ, ಬದರೀನಾಥ್ ಅವರ ಕುಟುಂಬದವರಿಗೆ ಹರಿವಾಯುಗುರುಗಳು ಅನುಗ್ರಹಿಸಲಿ.

ಸತ್ಯಧ್ಯಾನಚಾರ್ ಕಟ್ಟಿ

ಶ್ರೀರಾಮ

ಶ್ರೀ ಸತ್ಯನಾಥತೀರ್ಥರು

ಸರ್ವಾಣಿನಾಮಾನಿ= ಸಕಲ ನಾಮಗಳು, **ಯಂ=**ಯಾವನಲ್ಲಿ, **ಆ=**ಮುಖ್ಯ ವೃತ್ತಿಯಿಂದ, ವಿಶಂತಿ= ಪ್ರವೇಶಿಸುವವೋ, **ತಂ=**ಅಂಥ, **ಪರಮಂ=**ದೇಶ ಕಾಲಗಳ ಸೀಮಾತೀತವಾದ ಗುಣ (ಶಬ್ದ ಪ್ರವೃತ್ತಿ ನಿಮಿತ್ತ)ಗಳುಳ್ಳವನನ್ನು, **ವಿಷ್ಣುಂವೈ=** ವಿಷ್ಣುವೇ ! ಎಂಬುದಾಗಿ, **ಉದಾಹರಂತಿ=** ಜ್ಞಾನಿಗಳು ಹೇಳುತ್ತಾರೆ (ಪುಟ–24, ಜನ್ಮಾಧಿಕರಣ, ಸಂಪುಟ–3, ಶ್ರೀ ಮನ್ನ್ಯಾಯಸುಧಾ) ಇಂಥಹ ಭಗವಂತನಾದ ಶ್ರೀ ಮಹಾವಿಷ್ಣುವು **(ನಾರಾಯಣನು)** ಶ್ರೀ ಹಂಸನಾಮಕನಾಗಿ ಅವತರಿಸಿದನು. ಹಾಗೂ ಶ್ರೀ ಹಂಸನಾಮನು ಶ್ರೀ ಉತ್ತರನೆಂದು ಕರೆಸಿಕೊಂಡು ಸ್ಥಾಪಿಸಿದ ಮಠವು **ಶ್ರೀ ಉತ್ತರಾದಿ ಮಠವು.** ಇಂತಹ ಮಹಿಮೋಪೇತವಾದ ಮಠದಲ್ಲಿ ಶ್ರೀ ಮಧ್ವಾಚಾರ್ಯರ ಪರಂಪರೆಯಲ್ಲಿ **ಶ್ರೀ ಸತ್ಯನಾಥರು** ಇಪ್ಪತ್ತನೆಯವರು. ಮಹಾಮಹಿಮರಾದ ಶ್ರೀ ಸತ್ಯನಾಥತೀರ್ಥರ ಬೃಂದಾವನವು ವೀರಚೋಳ ಪುರದಲ್ಲಿದೆ. ಇವರ ವೃಂದಾವನವು ಬಹಳ ಸುಂದರವಾಗಿದೆ.

ಶ್ರೀ ಸತ್ಯನಾಥರು, ಶ್ರೀ ಸತ್ಯನಿಧಿತೀರ್ಥರ ವರಕುಮಾರರು. ವಿದ್ಯಾ ಸಂಪನ್ನರಾಗಿದ್ದವರು ಹಾಗೂ ವೇದಶಾಸ್ತ್ರ ಪಾರಂಗತರಾಗಿ ವಿದ್ವನ್ಮಣಿಗಳಿಂದ ಸನ್ಮಾನಿತರಾಗಿದ್ದವರು. ಜ್ಞಾನ ವೈರಾಗ್ಯ ಚಕ್ರವರ್ತಿಗಳಾದ ಇವರು ಭಕ್ತಜನ ಸಮೂಹದಿಂದ ವಂದಿತರಾಗಿದ್ದರು. ಎಲ್ಲಾ ವರ್ಗದವರಿಂದಲೂ ಸನ್ಮಾನಿತರಾಗಿದ್ದರು. ಇವರ ಗುರುಗಳಾದ ಶ್ರೀ ಸತ್ಯನಿಧಿತೀರ್ಥರ ಚರಿತ್ರೆಯನ್ನು ಕವಿಗಳಾದ ಶ್ರೀ ಶ್ರೀನಿವಾಸಾಚಾರ್ಯರು ''ಶ್ರೀ ಸತ್ಯನಿಧಿವಿಲಾಸ'' ಎಂಬ ಕಾವ್ಯದಲ್ಲಿ ಬಹಳ ಸುಂದರವಾಗಿ ಚಿತ್ರಿಸಿದ್ದಾರೆ. ಆಗಿನ ಕಾಲದಲ್ಲಿದ್ದ ವಸ್ತುಸ್ಥಿತಿ, ಐತಿಹಾಸಿಕ ಘಟನೆಗಳನ್ನು ಯಾವ ಉತ್ಪ್ರೇಕ್ಷೆ ಇಲ್ಲದೆ ವಿಶದವಾಗಿ ಹೇಳಿದ್ದಾರೆ. **''ಶ್ರೀ ಸತ್ಯನಾಥತೀರ್ಥ'' ಶ್ರೀ ಚರಣ ಚರಣಾರಾಧಕ ಲಕ್ಷ್ಮೀಶ್ವರ ನರಸಿಂಹ ಕೃತಾಯಾಂ ಸತ್ಯನಿಧಿವಿಲಾಸಾಟೀಕಾಯಾಂ ಸರ್ವತೋವಿ–ಸಾಖ್ಯಾಯಾಂ ಅಷ್ಟಮಃ ಸರ್ಗಃ''** ಚತುರ್ದಶ ವಿದ್ಯೆಗಳ ಗುರುಗಳಾದ ಶ್ರೀ ಸತ್ಯನಾಥ ಯತಿರಾಜರ ಕಾಂತಿಯುತ ಪಾದಗಳ ಸೇವನದಿಂದ

ಪಂಡಿತರಾಜನೆಂಬ ಬಿರುದು ಭೂಷಿತನಾದ, ರಾಮಚಂದ್ರನ ಗುಣವರ್ಣನು- ಸುಧಾಸ್ವಾದನದಲ್ಲೇ ಆಸಕ್ತನಾದ ಶ್ರೀನಿವಾಸ ಕವಿಯು... (ಶ್ರೀಸತ್ಯನಿಧಿ ವಿಲಾಸ-ಪುಟ 200) ತಾವು ಬರೆದಿರುವ ಶ್ರೀ ಸತ್ಯನಿಧಿವಿಲಾಸದಲ್ಲಿ ತಮ್ಮ ಗುರುಗಳಾದ ಶ್ರೀ ಸತ್ಯನಾಥ ತೀರ್ಥರನ್ನು ಕೊಂಡಾಡಿದ್ದಾರೆ. ಶ್ರೀ ಸತ್ಯನಾಥರು ಮಾಧ್ವ ವಾಙ್ಮಯಕ್ಕೆ ತಾವು ಬರೆದ ಗ್ರಂಥಗಳಿಂದ ಅಸಮಾನ ಕೊಡುಗೆಯನ್ನಿತ್ತಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು. ಶ್ರೀ ಸತ್ಯನಾಥರು ಬರೆದಿರುವ ಗ್ರಂಥಗಳಲ್ಲಿ ಮುಖ್ಯವಾದವು. **1) ಕರ್ಮ ನಿರ್ಣಯ ಟಿಪ್ಪಣಿ, 2) ವಿಜಯಮಾಲಾ 3) ಅಭಿನವ ಚಂದ್ರಿಕಾ 4) ಅಭಿನವಾಮೃತ 5) ಅಭಿನವ ಗದಾ 6) ಪರಶು 7) ಅಭಿನವತಾಂಡವ.** ಶ್ರೀಗಳು ಅಭಿನವ ಚಂದ್ರಿಕಾದಲ್ಲಿ ಪೂರ್ವಪಕ್ಷವನ್ನು ಮತ್ತು ಸಿದ್ಧಾಂತವನ್ನು ಪ್ರತಿ ಅಧಿಕರಣದಲ್ಲಿ ಹೇಳಿ, ನಂತರ ತಮ್ಮ ಗುರುಗಳಾದ ಶ್ರೀ ಸತ್ಯನಿಧಿ ತೀರ್ಥರ ಅಭಿಪ್ರಾಯವನ್ನು ಅನುಸರಿಸಿ ಪೂರ್ವ ಪಕ್ಷವನ್ನು ಖಂಡನೆಯನ್ನು ಮಾಡುತ್ತಾರೆ. ಅಲ್ಲದೇ, ಶ್ರೀಗಳವರ ಬರವಣಿಗೆ ತುಂಬಾ ಸತ್ವಯುತವಾಗಿದ್ದು ಹಾಗೂ ಹೇಳುವ ವಿಷಯವನ್ನು ತೀಕ್ಷ್ಣವಾಗಿ ಹೇಳಿದ್ದಾರೆ.

ಶ್ರೀಗಳವರು ಶ್ರೀ ವ್ಯಾಸರಾಜ ಮಠದ ಶ್ರೀ ಲಕ್ಷ್ಮೀನಾರಾಯಣ ತೀರ್ಥರ ಸಮಕಾಲೀನರೆಂದು ತಿಳಿದುಬರುತ್ತದೆ. ಅಲ್ಲದೇ, ಮೊಗಲ್ ಸಾಮ್ರಾಟನಾದ ಔರಂಗಜೇಬ್‌ನ ಸಮಕಾಲೀನರೆಂದು ತಿಳಿದು ಬರುತ್ತದೆ. **''ಕೊಂಕಣಾಭ್ಯುದಯ''**ದ ಪ್ರಕಾರ, ಶ್ರೀಗಳವರು, ಕಾಶಿಯನ್ನು ಮೊಗಲ್ ಸಾಮ್ರಾಟನಾದ ಔರಂಗಜೇಬ್‌ನು ಹಿಂದುಗಳನ್ನು ಚಿತ್ರಹಿಂಸೆ ಮಾಡುತ್ತಿದ್ದ ಕಾಲದಲ್ಲಿ ಸಂದರ್ಶಿಸಿದರಂತೆ. ಅಲ್ಲದೇ, ಇದೇ ಸಮಯದಲ್ಲಿ ಗಯಾ ಕ್ಷೇತ್ರವನ್ನು ಸಂದರ್ಶಿಸಿ ಉತ್ತರಾದಿಮಠದ ಅಧಿಪತ್ಯವನ್ನು ಗಯಾ ವಾಡರುಗಳ ಮೇಲೆ ಭದ್ರ ಪಡಿಸಿದರಂತೆ; ಇವರ ಹಿಂದಿನವರಾದ **ಶ್ರೀವಿದ್ಯಾಧೀಶರು** ಗಯಾವಾಡರನ್ನು ಮಾಧ್ವ ಮಠಕ್ಕೆ ಸೆಳೆದುಕೊಂಡಿದ್ದರು. ಇವರ ವಿಶ್ರುತ ಮತ್ತು ಜಯಪ್ರದವಾದ ಸಂಸ್ಥಾಧಿಪತ್ಯವನ್ನು ಹಾಗೂ ಕಾರ್ಯಾಚರಣೆಯನ್ನು ಶ್ರೀ ಚಲಾರಿ ಸಂಕರ್ಷಣಾಚಾರ್ಯರು ತಮ್ಮ **''ಸತ್ಯನಾಥ ಮಹಾತ್ಮ್ಯ ಸ್ತುತಿ ರತ್ನಾಕರ''**ದಲ್ಲಿ **''ಗುಣಗಾನ''** ಮಾಡಿದ್ದಾರೆ. ಶ್ರೀ ಚಲಾರಿ ಶೇಷಾಚಾರ್ಯರ

ಮಕ್ಕಳಾದ ಇವರು **ಶ್ರೀ ಜಯತೀರ್ಥರ ಜೀವನ ಚರಿತ್ರ**ೆಯನ್ನು ಐದು ಸರ್ಗಗಳಲ್ಲಿ ಬರೆದಿದ್ದಾರೆ. ಅಲ್ಲದೇ ಇವರು "ಶ್ರೀ ಸತ್ಯನಾಥಾಭ್ಯುದಯ"ವನ್ನು ಹನ್ನೊಂದು ಸರ್ಗಗಳಲ್ಲಿ ಬರೆದಿದ್ದಾರೆ. ಈ ಕೃತಿಯು ಶ್ರೀ ಮಧ್ವವಿಜಯದ ಧಾಟಿಯನ್ನು ಅನುಸರಿಸಿದೆ. ಶ್ರೀ ಬಿ.ಎನ್.ಕೆ.ಶರ್ಮ ರವರು ತಮ್ಮ "History of the Dviata School of Vedanta" ದಲ್ಲಿ ಪುಟ 501 ರಲ್ಲಿ "This work is presumably the same as the Satyanatha Mahatmaratnakara quoted in the Konkanabhyudhaya, Sagara Ramacharya" ಎಂದಿದ್ದಾರೆ.

ಶ್ರೀ ಸತ್ಯನಾಥರ ಪೂರ್ವಾಶ್ರಮದ ಹೆಸರು ಶ್ರೀ ನರಸಿಂಹಾಚಾರ್ಯರು. ಇವರ ತಂದೆಯ ಹೆಸರು ಕೃಷ್ಣಾಚಾರ್ಯರು, ತಾಯಿಯ ಹೆಸರು ರುಕ್ಮಿಣಿದೇವಿಯವರು. ಇವರಿಬ್ಬರ ಸುಪುತ್ರರೆ ನರಸಿಂಹಾಚಾರ್ಯರು. ಮೌನಭಾರ್ಗವ ಗೋತ್ರದವರಾದ ಇವರು ಅವಧಾನಿ ಮನೆತನದವರೆಂದು ಹೆಸರಾಗಿದ್ದರು. ಮರೀಚಿ ಋಷಿಗಳ ಕ್ಷೇತ್ರವೆಂದೇ ಪ್ರಖ್ಯಾತವಾಗಿರುವ ಮಿರಜ್‌ನಲ್ಲಿ ವಾಸವಾಗಿದ್ದರು. ತಮಗೆ ಉತ್ತಮನಾದ ಪುತ್ರನಾಗಬೇಕೆಂದು ಕೃಷ್ಣಾತೀರದಲ್ಲಿರುವ **ಧೂಮಾ ನರಸಿಂಹನನ್ನು** ಭಕ್ತಿ, ಶ್ರದ್ಧೆಯಿಂದ ಒಂದು ವರ್ಷ ಪರ್ಯಂತ ನಿರಂತರ ಸೇವೆ ಮಾಡಿ, ಸ್ವಾಮಿಯ ವರಪ್ರಸಾದದಿಂದ ಹುಟ್ಟಿದ ಮಗನಿಗೆ ನರಸಿಂಹನೆಂಬ ನಾಮಕರಣ ಮಾಡಿ, ಕಾಲ–ಕಾಲಕ್ಕೆ ಉಪನಯನ, ವೇದಾಧ್ಯಯನವನ್ನು ಮಾಡಿಸಿದರು. ತರುವಾಯ ನರಸಿಂಹನು ಕೊಲ್ಹಾಪುರದ ಹತ್ತಿರವಿರುವ ಜಯಸಿಂಗಪುರದಲ್ಲಿ ಆಗ್ಯೇ ವಾಸವಾಗಿದ್ದ, ಮಹಾಪಂಡಿತರು, ವಿದ್ವಾಂಸರು, ಶ್ರೇಷ್ಟವಾದ ಗ್ರಂಥಗಳನ್ನು ಅಧ್ಯಯನ ಮಾಡಿದ್ದ ಬುಧಗಾಂವಿ ನರಸಿಂಹಾಚಾರ್ಯರ ಬಳಿ ವಿದ್ಯಾಭ್ಯಾಸ ಮಾಡಿ ವ್ಯಾಕರಣ, ಸಾಹಿತ್ಯ, ಮೀಮಾಂಸ ಇತ್ಯಾದಿಗಳಲ್ಲಿ ಪಾಂಡಿತ್ಯವನ್ನು ಪಡೆದರು. ಹದಿನೆಂಟನೆ ವಯಸ್ಸಿನಲ್ಲಿ ಗೃಹಸ್ಥಾಶ್ರಮವನ್ನು ಸ್ವೀಕರಿಸಿದರು.

ನರಸಿಂಹಾಚಾರ್ಯ ಅವಧಾನಿಗಳು ತಮ್ಮ ಇಪ್ಪತ್ತನೇ ವಯಸ್ಸಿನಲ್ಲಿ ಆಗ್ಯೇ ಶ್ರೀಮದುತ್ತರಾದಿ ಮಠದ ಪೀಠದಲ್ಲಿ ವಿರಾಜಮಾನರಾಗಿ ಪಂಡಿತ ಪಾಮರರಿಂದ ವಂದಿತರಾಗಿದ್ದ ಶ್ರೀವೇದನಿಧಿ ತೀರ್ಥರ ಬಳಿ ಹೋಗಿ ತಮ್ಮ

ಸಾಧನೆಗೆ ಸಂನ್ಯಾಸಾಶ್ರಮವನ್ನು ನೀಡಬೇಕೆಂದು ಬೇಡಿದರು. ಶ್ರೀ ವೇದನಿಧಿಗಳು ಉತ್ತರಾದಿ ಮಠದ ಮಹಾಧಿಪತ್ಯವನ್ನು ಹೊರಬೇಕಾಗಿರುವ ಇವರಿಗೆ ಈಗಿನಿಂದಲೇ ಸನ್ಯಾಸವೇಕೆಂದು ಸುಮ್ಮನಾದರು. ಇವರಿಗೆ ಸಹಪಾಠಿಯಾಗಿದ್ದ ವ್ಯಾಸಾಚಾರ್ಯರಿಗೆ ಸನ್ಯಾಸನವನ್ನಿತ್ತು **ಶ್ರೀ ಸತ್ಯಾನಂದತೀರ್ಥರೆಂದು** ಕರೆದರು. ಶ್ರೀ ನರಸಿಂಹಾಚಾರ್ಯ ಅವಧಾನಿಯವರು, ಆಶ್ರಮ ಜ್ಯೇಷ್ಠರಾಗಿದ್ದ ಶ್ರೀ ಕೃಷ್ಣದ್ವೈಪಾಯನಚಾರ್ಯರ ಬಳಿ ವಿಜಾಪುರಕ್ಕೆ ಹೋಗಿ ಸನ್ಯಾಸನವನ್ನು ಪಡೆದು **ಶ್ರೀ ವಿದ್ಯಾನಾಥ ತೀರ್ಥ**ರೆಂದು ಹೆಸರು ಪಡೆದು ಪಾಠ ಪ್ರವಚನ ವಾದಿನಿಗ್ರಹಗಳನ್ನು ಮಾಡುತ್ತಾ ಎಲ್ಲಡೆ ದಿಗ್ವಿಜಯ ಮಾಡಿದರು. ವಿಷಯ ತಿಳಿದ ವೇದನಿಧಿಗಳು, ಶ್ರೀ ಮದುದ್ಧತ್ತರಾದಿ ಮಠದ ಪೀಠವನ್ನಲಂಕರಿಸಿ ಜಗದುದ್ಧಾರವನ್ನು ಮಾಡುವವರಾದ ವಿದ್ಯಾನಾಥರು ಕೇವಲ ಆತ್ಮೋದ್ಧಾರಕ್ಕೆ ಸಿಮೀತವಾಗಬಾರದೆಂದು ತಿಳಿದು ಅವರಿಗೆ ಬರಲು ರಾಯಸ ಕಳುಹಿದರು. ಅಂತಯೆ ವಿದ್ಯಾನಾಥರು ಸಾಂಗಲಿಯಲ್ಲಿದ್ದ ಶ್ರೀ ವೇದನಿಧಿಗಳಲ್ಲಿ ಬಂದರು. ಶ್ರೀಗಳವರು ದಂಡ ವ್ಯತ್ಯಾಸ ಮತ್ತು ಉಪದೇಶವನ್ನು ಮತ್ತೆ ಮಾಡಿ **ಶ್ರೀ ರಂಗನಾಥ ತೀರ್ಥ**ರೆಂದು ಕರೆದರು. ಶ್ರೀರಂಗನಾಥರು ಸಾಂಗಲಿಯಲ್ಲಿ ಶ್ರೀ ವೇದನಿಧಿಗಳಿಂದ ಸ್ಥಾಪಿತವಾಗಿದ್ದ ಪಾಠಶಾಲೆಯಲ್ಲಿ 14ವರ್ಷ ಪಾಠಪ್ರವಚನ ಮಾಡುತ್ತಿದ್ದರು.

ಶ್ರೀ ವೇದನಿಧಿಗಳು ಈ ಮಧ್ಯೆ ತಮ್ಮ ಆರೋಗ್ಯ ತಪ್ಪಲು ಈಗಾಗಲೇ ಸನ್ಯಾಸಾಶ್ರಮವನ್ನು ತಮ್ಮ ಗುರುಗಳಾದ ಶ್ರೀ ವಿದ್ಯಾಧೀಶರಿಂದ ಪಡೆದಿದ್ದ ಧರ್ಮಪುರಿಯಲ್ಲಿದ್ದ ಕೊರಟಗಿ ರಂಗಾಚಾರ್ಯರಿಗೆ ಹೇಳಿ ಕಳುಹಿಸಿ, ಅವರಿಗೆ ಸಂಸ್ಥಾನಾಧಿಪತ್ಯವನ್ನು ವಹಿಸಿ **ಶ್ರೀಸತ್ಯವ್ರತತೀರ್ಥರೆಂದು** ಕರೆದರು. ಜ್ಞಾನ ವೈರಾಗ್ಯಶಾಲಿಗಳು ಪ್ರಕಾಂಡ ಪಂಡಿತರು ಆದ ಶ್ರೀ ಸತ್ಯವ್ರತರು ಸುಮಾರು ಮೂರು ವರ್ಷ ಮೂರು ತಿಂಗಳು ಇಪ್ಪತ್ತೆರಡು ದಿವಸ ಶ್ರೀ ಮದುತ್ತರಾದಿ ಮಠದ ಪೀಠವನ್ನಲಂಕರಿಸಿ ಸಾಂಗಲಿಯಲ್ಲಿ ಸಶರೀರರಾಗಿ ವೃಂದಾವನಸ್ಥರಾದರು. ಕೃಷ್ಣಾನದಿ ತೀರದಲ್ಲಿ ಸಾಂಗವಾಗಿ ಲೀನರಾದ್ದರಿಂದ ಈ ಸ್ಥಳಕ್ಕೆ **''ಸಾಂಗಲಿ''** ಎಂದು ಹೆಸರು ಬಂದಿತು. ಸಾಂಗಲಿ, ಮೀರಜ್ ಕೊಲ್ಹಾಪುರಗಳು ವೈಷ್ಣವ ಸಿದ್ಧಾಂತದ ಕ್ಷೇತ್ರಗಳಾಗಿದ್ದವು. ಪ್ರಾತಃ ಸ್ಮರಣೀಯರು, ಜ್ಞಾನ, ವೈರಾಗ್ಯ

ಶಿಖಾಮಣಿಗಳು, ಕಲಿಯುಗದ ಕಲ್ಪವೃಕ್ಷ, ಕಾಮಧೇನುಗಳಾದ ಶ್ರೀ ಸತ್ಯವ್ರತರ ವೃಂದಾವನವು ಕೃಷ್ಣಾನದಿ ತೀರದಲ್ಲಿದೆ. ಇವತ್ತಿಗೂ ಅವರು ಜೀವಂತರಾಗಿರುವರೆಂದು ಪ್ರತೀತಿ. ಶ್ರೀಗಳವರು ಸೂರ್ಯೋದಯಕ್ಕೆ ಮುಂಚೆ ದಿನನಿತ್ಯವು ಕೃಷ್ಣವೇಣಿಯಲ್ಲಿ ಮಿಂದಿರುವದನ್ನು ನೋಡಿರುವ ಸೌಭಾಗ್ಯ ತಮ್ಮದು ಎಂದು ಕೆಲವರು ವೃದ್ಧರು ಹೇಳುತ್ತಾರೆ. **ಶ್ರೀ ಸತ್ಯಸಂಧರ ಕಾಲ**ದಲ್ಲಿ ಶ್ರೀ ಸತ್ಯವ್ರತರ ವೃಂದಾವನದ ಬಳಿ **ಶ್ರೀ ಮೂಲ ರಾಮ ಶ್ರೀ ಸೀತಾದೇವಿಯರ ಪೂಜೆ ಹಾಗೂ ಶ್ರೀಮನ್ಯಾಯಸುಧಾ ಪ್ರವಚನ** ಮಾಡಿದಾಗ **ತಮ್ಮ ವಂಶದವರು** ಹಾಗೂ ತಮ್ಮ ಪ್ರಪ್ರಶಿಷ್ಯರಾದ ಶ್ರೀ ಸತ್ಯಸಂಧರ ವಾಕ್ ವೈಖರಿಗೆ ಮೆಚ್ಚಿ ವೃಂದಾವನಾಂತರ್ಗತ ಶ್ರೀಸತ್ಯವ್ರತರು ಶಿರಃ ಕಂಪನವನ್ನು ಬೃಂದಾವನವು ತಲೆ ತೂಗುವಂತೆ(ಚಲಿಸುವಂತೆ) ಮಾಡಿದರು. ಇದೇ ರೀತಿ ಶ್ರೀ ಸತ್ಯಧ್ಯಾನ ತೀರ್ಥರ ಕಾಲದಲ್ಲಿ ನಡೆಯಿತಂತೆ.

ಕಾಮಿತಾರ್ಥ ಪ್ರದಾಯಿಕರಾದ ಇವರು ರಘುನಾಥ ಜೋಷಿಯೆಂಬ ಬ್ರಾಹ್ಮಣೋತ್ತಮನು ತಮ್ಮ ನಾಲ್ಕು ಜನ ಗಂಡು ಮಕ್ಕಳು ಪ್ರವಾಹದಲ್ಲಿ ಕೊಚ್ಚಿಹೋಗಲು, ಇಳಿ ವಯಸ್ಸಿನವರಾದ ಅವರು ಶ್ರೀ ಸತ್ಯವ್ರತ ವೃಂದಾವನಕ್ಕೆ ತಮ್ಮ ಧರ್ಮಪತ್ನಿಯೊಡಗೂಡಿ ಸೇವೆ ಮಾಡಲು, ಸ್ವಪ್ನದಲ್ಲಿ ಶ್ರೀಗಳವರು ದರ್ಶನವಿತ್ತು ಎಂಟು ಉತ್ತತ್ತಿಗಳನ್ನು ಅನುಗ್ರಹಿಸಿದರು. ವರ್ಷಕ್ಕೆ ಎರಡರಂತೆ ನಾಲ್ಕು ವರ್ಷಗಳಲ್ಲಿ ಎಂಟು ಪುತ್ರರನ್ನು ಪಡೆದು, **ಅಷ್ಟ-ಪುತ್ರಚಾರ್ಯ**ರೆಂದೇ ಹೆಸರಾದರು. ಶ್ರೀ ಸತ್ಯಪರಾಕ್ರಮ ತೀರ್ಥರು ತಾವು ಬರೆದ **''ಶ್ರೀ ಸತ್ಯವ್ರತ ಗುರುರಾಜ ಸ್ತೋತ್ರದಲ್ಲಿ''**

ನಿತ್ಯಂ ಪ್ರಸನ್ನಂ ಭಗವತ್ ಸತ್ಯವತ್ಯಾತ್ಮಜ ಪ್ರಿಯಮ್
ಅತ್ಯದ್ಭುತೋ ಮಾಹಾತ್ಮಂ ಭಜೆ ಸತ್ಯವ್ರತಂ ಗುರುಮ್

ನಿತ್ಯದಲ್ಲಿಯೂ ಭಕ್ತರಿಗೆ ಅನುಗ್ರಹ ಉನ್ಮುಖರಾದ, ಪೂಜ್ಯರಾದ, ಸತ್ಯವತಿದೇವಿಯಲ್ಲಿ (ಆತ್ಮಜ) ಅವತರಿಸಿದ ವೇದವ್ಯಾಸ ದೇವರಿಗೆ ಪ್ರಿಯರಾದ ಬಹಳ ಆಶ್ಚರ್ಯಕರವಾದ, ವಿಶಾಲವಾದ ಮಹಾತ್ಮೆಯುಳ್ಳ, ಸತ್ಯವ್ರತ ಗುರುಗಳನ್ನು ಆಶ್ರಯಿಸುತ್ತೇನೆ. ಎಂದು ಬರೆದಿದ್ದಾರೆ.

ಆಶ್ರಮ ಜೇಷ್ಠರಾಗಿದ್ದ ಶ್ರೀಕೃಷ್ಣ ದ್ವೈಪಾಯನಾಚಾರ್ಯರಿಗೆ, ಮಠದ ಕೆಲವು ಶಿಷ್ಯರು ಸಂಸ್ಥಾನಾಧಿಪತ್ಯವನ್ನು ಕೊಡಿಸಬೇಕೆಂದು? ಶ್ರೀ ಸತ್ಯವ್ರತರು ಸಂಸ್ಥಾನಾಧಿಪತ್ಯವನ್ನು ವಹಿಸಿಕೊಂಡ ಕೆಲವು ದಿನಗಳಾದ ಮೇಲೆ ಅವರನ್ನು ಕರೆದುಕೊಂಡು ಬಂದರು. ಆಗ ಶ್ರೀ ಸತ್ಯವ್ರತತೀರ್ಥರು ತಮ್ಮ ಪರಮ ಗುರುಗಳಾಗಿದ್ದ ಶ್ರೀ ವೇದವ್ಯಾಸ ತೀರ್ಥರಿಂದ ಆಶ್ರಮ ಪಡೆದಿದ್ದ ಶ್ರೀ ಕೃಷ್ಣ ದ್ವೈಪಾಯನರಿಗೆ ನಮಸ್ಕರಿಸಿ ಸಂಸ್ಥಾನಕ್ಕೆ ಅಪ್ಪಣೆ ಕೇಳಿದರು. ಆಗ ಆಶ್ರಮ ಜೇಷ್ಠರಾದ ಶ್ರೀ ಕೃಷ್ಣ ದ್ವೈಪಾಯನರು ಸಂತೋಷದಿಂದ ಅನುಮತಿಯನ್ನಿತ್ತರು.

ಮಹಾನುಭಾವರಾದ ಶ್ರೀ ಕೃಷ್ಣ ದ್ವೈಪಾಯನತೀರ್ಥರೆಂದೂ ಸಂಸ್ಥಾನವನ್ನು ಬಯಸಿದವರಲ್ಲ. ಶಿಷ್ಯರ ಹಾಗೂ ಕೆಲವು ಜನರ ಒತ್ತಾಯಕ್ಕೆ ಮಣಿದು ಮಠಾಧಿಪತ್ಯವನ್ನು ವಹಿಸಿಕೊಳ್ಳಲು ಇರಾದೆ ತೋರಿದರು. ಶ್ರೀ ಸತ್ಯವ್ರತರು ತಾವೇ ಮುಂದುವರೆಯಲು ಅಪ್ಪಣೆ ಕೋರಲು ಸಂತೋಷದಿಂದ ಒಪ್ಪಿದ ಯೋಗಿಗಳು. ಮಹಾನುಭಾವರಾದರಿವರು ಪೂರ್ವದಲ್ಲಿ ದೃಷ್ಟದ್ಯುಮ್ನನಾಗಿ ಆಚಾರ್ಯ ದ್ರೋಣರ ದೇಹವನ್ನು ನಾಶಮಾಡಿದ ಪ್ರಾಯಶ್ಚಿತ್ತಕ್ಕಾಗಿ ಮನುಜ ಜನ್ಮವನ್ನೆತ್ತಿದರಂತೆ. ಶ್ರೀ ವ್ಯಾಸರಾಜರ ಕಾಲದಲ್ಲಿ ಗೋವಿಂದ ಒಡೆಯರಾಗಿ, ಅವರಿಂದ ಸೋತು, ಅವರಿಂದ ತಪ್ತ ಚಕ್ರಾಂಕವನ್ನು ಪಡೆದರೂ, ಜನ್ಮತಃ ವೈಷ್ಣವರಾಗಿ ಹುಟ್ಟಬೇಕೆಂದು, ಅವರಿಂದ ಅನುಗ್ರಹ ಪಡೆದು ಶ್ರೀ ಕೃಷ್ಣದ್ವೈಪಾಯನರಾಗಿ ಮತ್ತೆ ಶ್ರೀವ್ಯಾಸತತ್ವಜ್ಞರಾಗಿ ಜನ್ಮತಾಳಿದ ಮಹಿಮರು. ಶ್ರೀ ವ್ಯಾಸ ತತ್ವಜ್ಞರಾಗಿ ಹರಿದಾಸ ವಾಙ್ಮಯಕ್ಕೆ ''ಶ್ರೀ ವಾಸುದೇವವಿಠಲಾಂಕಿತ''ರಾಗಿ ದೊಡ್ಡ ಕೊಡುಗೆಯನ್ನಿತ್ತಿದ್ದಾರೆ. ಶ್ರೀ ಕೃಷ್ಣದ್ವೈಪಾಯನತೀರ್ಥರಾಗಿ ಶ್ರೀ ಮದುತ್ತರಾದಿ ಮಠದಲ್ಲಿ ಹದಿನೈದನೆಯವರಾದ ಶ್ರೀ ವೇದವ್ಯಾಸ ತೀರ್ಥರಿಂದ ಆಶ್ರಮ ಪಡೆದು ಗಂಗಾದೇವಿಯನ್ನು ಸಾಕ್ಷಾತ್ಕರಿಸಿ ಕೊಂಡವರಿವರು. ಒಮ್ಮೆ ಇವರು ಗಂಗಾ ನದಿಯ ಸ್ನಾನಕ್ಕೆಂದು ತಮ್ಮ ಶಿಷ್ಯರೊಡನೆ ಹೊರಟಾಗ ಅವರಿಗೆ ಸ್ವಪ್ನವಾಗಿ ಭಾಗೀರಥಿದೇವಿಯು ''ನಿಮ್ಮ ವಾಙ್ಮಯ ರೂಪಿ ಪ್ರವಾಹ ಮೀಯಲು ನಾನೇ ನೀವಿದ್ದೆಡೆ ವ್ಯಾಸ ಮಂದಿರಕ್ಕೆ ಬರುವೆನೆಂದು'' ಹೇಳಿ ಕೆಲವು ದಿನಗಳ ಮೇಲೆ ಅವರ ಕುಳಿತ ವ್ಯಾಸ ಮಂದಿರದಲ್ಲಿಯ ಮಾಡದಿಂದ ಶುಭ್ರ ನೀರಿನ ಝುರಿಯ

ಮಟ ನೆಗೆದು ಅವರ ತಲೆಯ ಮೇಲೆ ಹರಿಯಿತು. ಆಗ ಶಿಷ್ಯರು ಹಾಗೂ ಭಕ್ತ ಜನ ಮಿಂದು ಧನ್ಯರಾದರು.

ಅಲ್ಲದೇ, ಗುರುಗಳಾದ ವೇದವ್ಯಾಸ ತೀರ್ಥರನ್ನು ಒಮ್ಮೆ ಭೇಟಿಯಾದಾಗ ಅವರ ಜೊತೆಯಲ್ಲಿ ಸಂಸ್ಥಾನದ ಪೂಜೆಯನ್ನು ಮಾಡುವ ಸೌಭಾಗ್ಯ, ಶ್ರೀ ಕೃಷ್ಣದ್ವೈಪಾಯನತೀರ್ಥರಿಗೆ ದೊರಕಿತು. ಆಗ ಅವರು ತಾವು ಒಂದು ಕೋಟಿ ವೇದವ್ಯಾಸಮಂತ್ರದಿಂದ ಅಭಿಮಂತ್ರಿಸಿದ ಶಿಲೆಯನ್ನು ಮಠದಲ್ಲಿ ಪೂಜೆಯಾಗಲಿಯೆಂದು ಹರಳಿನ ಸಂಪುಟದಲ್ಲಿರಿಸಿ ಶ್ರೀ ವೇದವ್ಯಾಸರ ಮೂರ್ತಿಯನ್ನು ತೆಗೆದುಕೊಂಡು ಹೊರಡಲು ಅನುವಾದರು. ಆಗ ಶ್ರೀ ವೇದವ್ಯಾಸತೀರ್ಥರಿಗೂ ಹಾಗೂ ಶ್ರೀ ಕೃಷ್ಣ ದ್ವೈಪಾಯನ ತೀರ್ಥರಿಗೂ ಸ್ವಪ್ನದಲ್ಲಿ ಶ್ರೀ ವೇದವ್ಯಾಸದೇವರು ದರ್ಶನವಿತ್ತು ಯಥಾಸ್ಥಿತಿಯನ್ನುಳಿಸಿಕೊಳ್ಳಬೇಕೆಂಬ ಅಪ್ಪಣೆಯಾಯಿತು. ಶ್ರೀಕೃಷ್ಣ ದ್ವೈಪಾಯನ ತೀರ್ಥರು ಮಾರನೇ ದಿನ ಶ್ರೀಗಳವರ ಮುಂದೆ ಶ್ರೀ ವೇದವ್ಯಾಸಮೂರ್ತಿಯನ್ನಿರಿಸಿ ನಮಸ್ಕರಿಸಿದರು. ಶ್ರೀಗಳವರು, ಅಭಿಮಂತ್ರಿಸಿದ ಕರಿಶಿಲೆಯನ್ನೇನು ಮಾಡಬೇಕೆಂದು ಯೋಚಿಸುತ್ತಿರಲು ಶಿಷ್ಯರು ದೊಡ್ಡದಾದ ಹಾರೆಯನ್ನು ತಂದು ಜಜ್ಜಲು ಅವರುಗಳ ಕೈ ಬೊಬ್ಬೆಯಾಯಿತೇ ಹೊರತು ಅಭಿಮಂತ್ರಿಸಿದ ಶಿಲೆಯೇನಾಗಲಿಲ್ಲ. ಶ್ರೀಗಳವರು ಶ್ರೀ ಕೃಷ್ಣ ದ್ವೈಪಾಯನತೀರ್ಥರ ಮಹಿಮೆಯನ್ನು ಭಕ್ತ ಜನಸ್ತೋಮಕ್ಕೆ ಈ ರೀತಿ ಪರಿಚಯಿಸಿದರು. ಶ್ರೀಗಳವರು ವೇದವ್ಯಾಸ ಸಂಪುಟದ ಆರನೇ ಸಂಪುಟದಲ್ಲಿರಿಸಿ ಶ್ರೀ ಕೃಷ್ಣದ್ವೈಪಾಯನರಿಗೆ ಕೆಲವು ಪ್ರತಿಮೆಗಳನಿತ್ತು ಸಂಚಾರಕ್ಕೆ ಕಳುಹಿಸಿದರು. ಮುಂದೆ, ಆ ಮೂರ್ತಿಗಳನ್ನೆಲ್ಲಾ ಶ್ರೀ ಸತ್ಯನಾಥರಿಗೆ ಒಪ್ಪಿಸಿದರು. ಮಹಾಮಹಿಮರಾದ ಇವರ ವೃಂದಾವನ ಕುಸುಮರ್ತಿಯಲ್ಲಿದೆ. ಇದು ಭೀಮಾ ನದಿ ತೀರದಲ್ಲಿದೆ. ಭೀಮಾ ನದಿಯು ಕೃಷ್ಣಾ ನದಿಯ ಉಪನದಿಯಾಗಿದೆ.

ಮಹಿಮಾತಿಶಯರಾದ ಶ್ರೀ ಸತ್ಯವ್ರತರ ವರಕುಮಾರರು ಗೋದಾವರಿ ತೀರದಲ್ಲಿರುವ ಪೈಠಣದಲ್ಲಿ ವಾಸಿವಾಗಿದ್ದ ಪಾಂಡುರಂಗೀ ಆನಂದ ಭಟ್ಟಾರಕರ ಮಕ್ಕಳಾದ ಶ್ರೀ ಪುರುಷೋತ್ತಮಚಾರ್ಯರು ಹಾಗೂ ಸತ್ಯಾದೇವಿಯಲ್ಲಿ ಜನಿಸಿ ವೇದಾಂತ ಸಾಮ್ರಾಜ್ಯಪತಿಯಾದವರು. **ಶ್ರೀ ಸತ್ಯನಿಧಿ ತೀರ್ಥರು,**

''ವಾಕ್ಯಾರ್ಥ ಚಂದ್ರಿಕಾ''ರಚಿಸಿದ **ಶ್ರೀ ವಿದ್ಯಾಧೀಶತೀರ್ಥರ** ಅನುಗ್ರಹದಿಂದ ಹುಟ್ಟಿದವರು. ಆಶ್ರಮ ಪೂರ್ವದ ಹೆಸರು ಕೌಲಗಿ ರಘುನಾಥಾಚಾರ್ಯರು ('ಕೌಲಗಿರಘುಪತ್ಯಾಚಾರ್ಯರು') ಇವರು ಔರ್ವಗೋತ್ರದ ರಘುವರ್ಯಾಚಾರ್ಯರ ಮಗಳನ್ನು ಮದುವೆಯಾಗಿದ್ದರು. ಶ್ರೀ ಸತ್ಯವ್ರತತೀರ್ಥರು ತಮ್ಮ ಗುರುಗಳಾದ ಶ್ರೀ ವೇದನಿಧಿತೀರ್ಥರ ಆಜ್ಞೆಯಂತೆ ಇವರಿಗೆ ಆಶ್ರಮವನ್ನಿತ್ತರು. ಶ್ರೀ ಸತ್ಯನಿಧಿಗಳ ವೃಂದಾವನವು ಈಗ ಕರ್ನೂಲಿನಲ್ಲಿದೆ. ಪೂರ್ವದಲ್ಲಿ ನಿವೃತ್ತಿ ಸಂಗಮದಲ್ಲಿದ್ದು, ಅದು ಮುಳುಗಡೆಯಾಗಲು ಕರ್ನೂಲಿನಲ್ಲಿ ಪುನರ್ ಪ್ರತಿಷ್ಠಾಪನೆ ಮಾಡಿದೆ. ವೇದನಿಧಿತೀರ್ಥರು ವೃಂದಾವನಸ್ಥರಾಗುವ ಕಾಲದಲ್ಲಿ ಇವರು (ಆಶ್ರಮಪೂರ್ವದಲ್ಲಿ) ತಮ್ಮ ಮಕ್ಕಳ ಮುಂಜಿಗೆಂದು ಕಾಶಿಗೆ ಹೋಗಿದ್ದರು. ಆ ಕಾರಣಕ್ಕೆ ಏನೋ ಶ್ರೀ ಸತ್ಯವ್ರತರ ನಂತರ ಪಟ್ಟವು ಸಿಕ್ಕಿತು. ಕುಂಭಕೋಣದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳು ಇವರು ಸಂಚಾರ ನಿಮಿತ್ಯ ಹೋದಾಗ ತಮ್ಮಲ್ಲಿಗೆ ಕರೆಸಿಕೊಂಡು ತುಂಬಾ ಆದರಿಸಿದರು. ಆಗ ಮಠಗಳಲ್ಲಿ ಸೌಹಾರ್ದತೆಯು ಇತ್ತೆಂಬುದನ್ನು ತೋರಿಸುತ್ತೆ. ಹಾಗೆಯೇ, ವಿಜಯಪುರದ ಸರದಾರ ಅನಂತಪ್ರಭು ಮಹಾಸ್ವಾಮಿಗಳನ್ನು ಸಿಂಹಾಸನದ ಮೇಲೆ ಕೂರಿಸಿ ರತ್ನ, ಆಭರಣ, ಸುವರ್ಣಗಳಿಂದ ಅಭಿಷೇಕ ಮಾಡಿದ. ಅವುಗಳನ್ನು ಸ್ವಾಮಿಗಳು ಪಂಡಿತೋತ್ತಮರಿಗೆ ದಾನ ಮಾಡಿ, ಅಲ್ಲಿಂದ ರಾಮೇಶ್ವರ, ಕಂಚಿ, ತಿರುಪತಿ ಮುಖಾಂತರ ಚಂಜೀಗೆ ಹೋಗಿ ಅಲ್ಲಿ ವಿದ್ವತ್ ಸಭೆ ನಡೆಸಿ ಸುವರ್ಣ, ವಸ್ತ್ರ, ಧನ, ಕನಕಾದಿಗಳನ್ನಿತ್ತು ಸನ್ಮಾನ ಮಾಡಿದರು. ಮುಂದೆ, ಶ್ರೀರಂಗದಲ್ಲಿ ರಂಗನಾಥನಿಗೆ **''ವಚನ ಪ್ರಸೂನ ಮಾಲಾ''** ಅರ್ಪಿಸಿದರು. ಮುಂದೆ, ತಿಂಡಿವನಕ್ಕೆ ಬಂದು ಅಲ್ಲಿ ದೊಡ್ಡಸಭೆಯಲ್ಲಿ ಭಾಗವಹಿಸಿದರು. ಆ ಸಭೆಗೆ ಶ್ರೀವ್ಯಾಸತೀರ್ಥರು, ಶ್ರೀರಂಗನಾಥ ತೀರ್ಥರು, ಶ್ರೀ ಲಕ್ಷ್ಮೀಕಾಂತ ತೀರ್ಥರು, ಹಾಗೂ ಶ್ರೀ ಮುನೀಂದ್ರ ತೀರ್ಥರು ಸಹ ಬಂದಿದ್ದರು. ಆ ಸಭೆಯಲ್ಲಿ ಶ್ರೀ ರಂಗನಾಥ ತೀರ್ಥರು ಅಗಾಧ ಪಾಂಡಿತ್ಯ ಪ್ರದರ್ಶನ ಮಾಡಿದರು. ಇವರ ಪ್ರಖರ ಪಾಂಡಿತ್ಯ ಆಳವಾದ ವಿಚಾರ ಪ್ರತಿಪಾದನೆ, ವಿಶಯ ವಿಮರ್ಶೆ ಶ್ರೀ ಸತ್ಯನಿಧಿತೀರ್ಥರಿಗೆ ಬಹಳ ಮೆಚ್ಚುಗೆಯಾಯಿತು. ಶ್ರೀ ಮದುತ್ತರಾದಿ ಮಠಕ್ಕೆ ಹಾಗೂ ತಮ್ಮ ಉತ್ತರಾಧಿಕಾರಿಯಾಗಲು ಇವರೇ ಸರಿಯಾದವರೆಂದು ನಿಶ್ಚಯ

ಮಾಡಿದರು. ತಮ್ಮ ಗುರುಗಳ ಗುರುಗಳಾದ ಶ್ರೀವೇದನಿಧಿಗಳು ಈ ಕಾರಣಕ್ಕೇನೆ ಶ್ರೀ ವಿದ್ಯಾನಾಥರನ್ನು ತಮ್ಮಲ್ಲಿ ಕರೆಸಿಕೊಂಡು ಶ್ರೀರಂಗನಾಥರೆಂದು ಕರೆದು ಶ್ರೀ ಮಠದಲ್ಲಿ ಇರಿಸಿಕೊಂಡಿರುವರೆಂದು ತಿಳಿದರು. ಅಲ್ಲದೇ, ವ್ಯವಹಾರ ಜ್ಞಾನ, ವಾದ ಕೌಶಲ್ಯ, ವಾಕ್ಯಾರ್ಥ ಶೈಲಿಗೆ ಎಲ್ಲರೂ ನಿಬ್ಬರ ಬೆರಗಾದರು. ಶ್ರೀಗಳವರು ಆಗಲೇ ಶ್ರೀರಂಗನಾಥ ತೀರ್ಥರೇ ಮಠದ ಉತ್ತರಾಧಿಕಾರಿಗಳೆಂದು ಘೋಷಿಸಿ, ಒಂದು ಒಳ್ಳೆಯ ದಿನ ದಂಡ ವ್ಯತ್ಯಾಸ ಮಾಡಿ **ಶ್ರೀ ಸತ್ಯನಾಥ**ರೆಂದು ಕರೆದು ವ್ಯಾಸ ಸಂಪುಟವನ್ನು ಅವರ ಶಿರದ ಮೇಲಿರಿಸಿ, ಪೂಜೆ ಮಾಡಲು ಶ್ರೀವಂಶ ರಾಮದೇವರನ್ನು ಹಾಗೂ ತೃತೀಯ ಮುಷ್ಟಿಯನ್ನೀಡಿದರು.

ಶ್ರೀಸತ್ಯನಾಥರಿಗೆ **ಶ್ರೀ ಮೂಲರಾಮ, ಶ್ರೀ ಸೀತಾದೇವಿ, ಶ್ರೀಮದಾನಂದ ತೀರ್ಥರಲ್ಲಿ** ಭಕ್ತಿ ಹಾಗೂ ತಮ್ಮ ಗುರುಗಳಾದ **ಶ್ರೀಸತ್ಯನಿಧಿಗಳಲ್ಲಿ ಶ್ರೀ ಹರಿಯನ್ನು ಕಾಣುತ್ತಿದ್ದರು.** ತಾವು ಬರೆದಿರುವ **ಅಭಿನವ ಚಂದ್ರಿಕಾದ** ಎರಡನೇ ಅಧ್ಯಾಯದಲ್ಲಿ ಈ ರೀತಿ ವ್ಯಕ್ತಪಡಿಸಿದ್ದಾರೆ.

ಸೀತಯಾ ಸಹಿತಂ ಮೂಲರಾಮಮಿಕ್ಷ್ವಾಕುಪೂಜಿತಮ್
ಆನಂದತೀರ್ಥಮುನಿಪಂ ನಮಾಮಿ ಜ್ಞಾನಸಿದ್ಧಯೆ ||

ಯದನುಗ್ರಹಮಾತ್ರೇಣ ಸದ್ಭಿರಿಷ್ಟಮವಾಪ್ಯತೇ
ಭಕ್ತ್ಯಾ ನಮಾಮಿ ತಂ ಸತ್ಯನಿಧಿಂ ಲೋಕಗುರುಂ ಮುದೇ |

ನಾರಾಯಣಂ ನರಸಖಂ ಧ್ಯಾತ್ವಾ ಪುನಃ ಪುನಃ
ಅಸಮರ್ಥಃ ಸಮಾಧಾತುಂ ವಕ್ಷ್ಯೇಽಹಂ ತದನುಗ್ರಹಾತ್ ||

ಶ್ರೀ ಸತ್ಯನಾಥರು ಸಂಚಾರತ್ವೇನ ಮಳಖೇಡಕ್ಕೆ ಬಂದು ಪಾಠ ಹಾಗೂ ಪ್ರವಚನ ನಿರತರಾಗಿರಲು, ಗುರುಗಳಾದ ಶ್ರೀ ಸತ್ಯನಿಧಿ ತೀರ್ಥರು ಚಿಂಚೋಳಿಗೆ ಬಂದಿರುವರೆಂದು ತಿಳಿಯಿತು. ತಕ್ಷಣವೇ, ಅಲ್ಲಿಂದ ಮೇಣೆಯಲ್ಲಿ ಹೊರಟು ಚಿಂಚೋಳಿಗೆ ಬಂದು ಗುರುಗಳಿರುವ ನಿವಾಸಕ್ಕೆ ನಡೆದು ಬಂದು ಅವರಿಗೆ ವಂದಿಸಿ, ಸಂಚಾರ ಕಾಲದಲ್ಲಿ ಭಕ್ತಾದಿಗಳು ಶ್ರೀಮಂತರು ಹಾಗೂ ರಾಜರುಗಳು ನೀಡಿದ್ದ ಧನ, ಕನಕಾದಿ, ವಜ್ರ, ವೈಢೂರ್ಯಗಳನ್ನು ಗುರುಗಳ ಪಾದಕ್ಕೆ ಅರ್ಪಿಸಿ ಕೃತಕೃತ್ಯರಾದರು. ಅಲ್ಲಿಂದ ಶ್ರೀಗಳಿಬ್ಬರೂ ಗೋದಾವರಿ

ಪುಷ್ಕರಕ್ಕೆ ಹೊರಟರು. ಅಲ್ಲಿಂದ ಕನ್ಯಾಗತ ಕೃಷ್ಣಾನದಿಯಲ್ಲಿ ಗಂಗಾಸ್ನಾನವನ್ನು ಮಾಡಿದರು.

ಅಲ್ಲಿಂದ ಶ್ರೀ ಸತ್ಯನಿಧಿಗಳು ನಿವೃತ್ತಿ ಸಂಗಮಕ್ಕೆ ಬಂದರು. ತಮ್ಮ ವಾಸಕ್ಕೆಂದು ಮಂಟಪವನ್ನು ಕಟ್ಟಿಸಿ ಪ್ರಾಣದೇವರನ್ನು ಪ್ರತಿಷ್ಟೈದಿದ್ದರು. ಈ ಮಧ್ಯೆ ಶ್ರೀ ಸತ್ಯನಾಥರು ಸಂಚಾರತ್ವೇನ ಧರ್ಮಪುರಿಯಲ್ಲಿದ್ದರು. ಶ್ರೀ ಸತ್ಯನಿಧಿಗಳು ತಾವೇ ಸಿದ್ಧಪಡಿಸಿಕೊಂಡಿದ್ದ ವೃಂದಾವನ ಪ್ರವೇಶ ಮಾಡುವ ಸಮಯ ಸನ್ನಿಹಿತವಾಗುತ್ತಿದೆಯೆಂದು ತಿಳಿದು ಶ್ರೀ ಸತ್ಯನಾಥರಿಗೆ ಬರುವುದಾಗಿ ಹೇಳಿಕಳುಹಿಸಿದರು. ಶ್ರೀ ಸತ್ಯನಾಥರು ಬಂದ ಮೇಲೆ ಶ್ರೀ ಸತ್ಯನಿಧಿಗಳು 1648 ಶಾರ್ವರೀನಾಮ ಸಂವತ್ಸರ ಮಾರ್ಗಶೀರ್ಷ ಶುದ್ಧ ದಶಮಿಯ ದಿನ ನಿವೃತ್ತಿ ಸಂಗಮದಲ್ಲಿ ಬೃಂದಾವನ ಪ್ರವೇಶವನ್ನು ಮಾಡಿದರು. ಶ್ರೀ ಸತ್ಯನಾಥರು ಬಹು ವಿಜೃಂಭಣೆಯಿಂದ ಗುರುಗಳ ಆರಾಧನೆಯನ್ನು ಮಾಡಿದರು. ಅದೇ ಸಮಯಕ್ಕೆ ಶ್ರೀ ಕೃಷ್ಣದ್ವೈಪಾಯನತೀರ್ಥರು ತಾವು ಬಹು ವೃದ್ಧರು ಅಲ್ಲದೇ ಗಂಗಾಯಾತ್ರೆಗೆ ಹೊರಟಿರುವುದರಿಂದ ತಮ್ಮಲ್ಲಿರುವ ಪ್ರಸನ್ನವಿಠ್ಠಲ, ವೇದವ್ಯಾಸಮುಷ್ಟಿ ಮತ್ತಿತರ ಪ್ರತಿಮೆಗಳನ್ನು ಬಂದು ಸ್ವೀಕರಿಸಿ ಗಂಗಾಯಾತ್ರೆಗೆ ಅಪ್ಪಣೆಕೊಡುವುದೆಂದು ವಿಜಯಪುರದಲ್ಲಿದ್ದ ಅವರು ಪತ್ರ ಕಳುಹಿಸಿದರು. ಶ್ರೀ ಸತ್ಯನಾಥರು ಆಶ್ರಮವನ್ನು ಮೊದಲು ಶ್ರೀ ಕೃಷ್ಣದ್ವೈಪಾಯನ ತೀರ್ಥರಿಂದ ಪಡೆದಿದ್ದವರು, ಅವರಿಗೆ ನಮಸ್ಕರಿಸಿ ಅವರಿಂದ ಎಲ್ಲಾ ಪ್ರತಿಮೆಗಳನ್ನು ಪಡೆದರು. ಮುಂದೆ ಶ್ರೀ ಕೃಷ್ಣಾದ್ವೈಪಾಯನತೀರ್ಥರು ರಾಯಚೂರು, ಕುಸುಮರ್ತಿಗೆ ಪ್ರಯಾಣಮಾಡಿದರು. ಭೀಮಾತೀರದಲ್ಲಿರುವ ಕುಸುಮರ್ತಿಗೆ ಬಂದಾಗ ದೇಹಾಲಸ್ಯವುಂಟಾಗಿ ಅಲ್ಲಿಯೇ ವೃಂದಾವನಸ್ಥರಾದರು.

ಮಹಾನುಭಾವರಾದ ಶ್ರೀ ಸತ್ಯನಾಥರು ಸಂಚಾರ ಮಾಡಿದಲ್ಲೆಲ್ಲಾ ಮಾಯಾವಾದಿಗಳನ್ನು ಗೆದ್ದು ದ್ವೈತ ಮತದ ಪತಾಕೆಯನ್ನಾರಿಸಿದರು. ಅವರು ಅದ್ವೈತ ತತ್ವವನ್ನು ಖಂಡಿಸಲು ಯುದ್ಧವನ್ನೇ ಸಾರಿದರು. ಶ್ರೀ ಬಿ.ಎನ್ಕೆ.ಶರ್ಮರವರು ತಮ್ಮ "History of the Dviata school of Vedanta" ದಲ್ಲಿ ಪುಟ 446ರಲ್ಲಿ ಈ ಕೆಳಕಂಡಂತೆ ಬರೆದಿದ್ದಾರೆ.

His determination to crush the rivalary of Monism is reflected in the choice of titles of two of his works called Parasus (the axe). His Abhinavagadha is a devastating criticism of Appaya's "Madhvamatamukha mardanam". He takes a bold stand on several points regarding the interpretation of the original texts. He is commenting and anticipates fresh objections against the originals and knocks them down. .... He is fond of detecting what he calls 'inter polations and corruptions in the texts and his own emendations and justifies them with gusto......

He strikes a bold and independent path in interpreting some of the passages in the "Tattva prakashika"

ಶ್ರೀ ಮಳಗಿ ಜಯತೀರ್ಥಚಾರ್ಯರು ''ಶ್ರೀಶ್ರೀ ಸತ್ಯನಾಥ ತೀರ್ಥರು'' ವಿನಲ್ಲಿ ಶ್ರೀ ಸತ್ಯನಾಥರ ಬಗ್ಗೆ ಈ ರೀತಿ ಬರೆದಿದ್ದಾರೆ. (ಪುಟ 49)

''ಶ್ರೀ ಸತ್ಯನಾಥರ ಲೇಖನ ಶೈಲಿಯೇ ಅಪೂರ್ವ''... ಹೊಸ ಹೊಸ ಕಲ್ಪನೆಗೆ, ನೂತನ ನಿರೂಪಣೆಗೆ ಹೆಸರಾದವರು..... ವಿಪಕ್ಷೀಯರು ಮಾಡಬಹುದಾದ ಆಕ್ಷೇಪಗಳನ್ನು ತಾವೇ ಊಹಿಸಿ ಅವುಗಳನ್ನು ನಿರಾಕರಿಸುವರು... ಸೃಜನ ಶೀಲತೆಯನ್ನು ವೇದಾಂತದಲ್ಲಿ ಅಳವಡಿಸಿದ ಕ್ರಾಂತಿ ಪುರುಷರು ವಿವಾದಗ್ರಸ್ಥ ವಿಷಯಗಳನ್ನು ಆಯ್ಕೆ ಮಾಡುವುದರಲ್ಲಿ ನಿಸ್ಸೀಮರು. ತಮ್ಮದೇ ಆದ ಅರ್ಥ ನಿರೂಪಣೆಗೆ ಪ್ರಸಿದ್ಧರು..........

ಪರಿಶಿಷ್ಟ 2, **''ಶ್ರೀಶ್ರೀ ಸತ್ಯನಾರ್ಥ ತೀರ್ಥರು''**ದಿಂದ ಆಯ್ದ ಕೆಲವು ಭಾಗಗಳನ್ನು ಮುಂದೆ ಕೊಟ್ಟಿದೆ.

(ಅ) **''ಅಭಿನವ ಚಂದ್ರಿಕಾ''** ಸಾವಿರ ಪುಟದ ಕೃತಿ. ಪ್ರತಿ ವಿಚಾರಗಳು ಒಂದು ಹೊಸದೃಷ್ಟಿ ನೀಡುತ್ತಲಿದೆ... ಶ್ರೀವ್ಯಾಸರಾಯರ, **ಶ್ರೀರಘೋತ್ತಮರ...** ಅಭಿಪ್ರಾಯಗಳನ್ನು ಕೊಟ್ಟು, ತಮ್ಮ ಸ್ವಂತ ವಿವರಣೆಯನ್ನು ಕೊಟ್ಟಿರುವರು. ಪೂರ್ವಪಕ್ಷ ಹಾಗೂ ಸಿದ್ಧಾಂತವನ್ನು ತಿಳಿಸಿ ಶಾಸ್ತ್ರಾಧ್ಯಯನ ಮಾಡುವವರಿಗೆ ತುಂಬಾ ಉಪಕಾರ ಮಾಡಿದ್ದಾರೆ. ನಾಲ್ಕು ಅಧ್ಯಾಯಗಳಿಗೆ ಪೂರ್ತಿ ಈ ಅಭಿನವ

ಚಂದ್ರಿಕಾ ರಚಿಸಿದ್ದಾರೆ. ಇದು ಶ್ರೀ ಜಯತೀರ್ಥರ "ತತ್ವ ಪ್ರಕಾಶಿಕಾ ಗ್ರಂಥಕ್ಕೆ ಅತ್ಯುಪಯುಕ್ತ ಟಿಪ್ಪಣಿ ."

(ಆ) **ಅಭಿನವಾಮೃತ:**– ಶ್ರೀ ಜಯತೀರ್ಥರ "**ಪ್ರಮಾಣಪದ್ಧತಿ**" ಎಂಬ ಗ್ರಂಥಕ್ಕೆ ವಿಸ್ತಾರವಾದ, ಪ್ರೌಢವಾದ, ಜಟಿಲವಾದ ಟಿಪ್ಪಣಿ, ಶೈಲಿ–ಪ್ರಾಸಾದಿಕವಾಗಿದೆ. "**ವಾದಾವಲಿ**"ಯ ವಿಶಯ ಸಂಗ್ರಹವಾಗಿದೆ.

(ಇ) **ಅಭಿನವತಾಂಡವ:**– ಇದು ಬೃಹತ್ತಾದ ಸ್ವತಂತ್ರಕೃತಿ. ವೈಷ್ಣವ ಸಿದ್ಧಾಂತದಲ್ಲಿ ಅಂಗೀಕರಿಸಲ್ಪಟ್ಟ ಪ್ರಮಾಣಾದಿಗಳ ಸ್ವರೂಪವನ್ನು ವಿಮರ್ಶಿಸಿ ವಿವರಿಸಿದ್ದಾರೆ. ಶ್ರೀ ಸತ್ಯನಾಥರು ಇಲ್ಲಿ ಸಮಗ್ರವಾಗಿ ನ್ಯಾಯ ವೈಶೇಷಿಕರ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ವಿಮರ್ಶಿಸಿದ್ದಾರೆ. ಗಂಗೇಶರ ಚಿಂತಾಮಣಿ ರಘುನಾಥ ದೀಧಿತಿ ರುಚಿದತ್ತ ಪ್ರಭಾಕರ, ರಾಮಾನುಜ, ಹರ್ಷ ಇವರುಗಳ ಅಭಿಪ್ರಾಯಗಳನ್ನು ವಿವರಿಸಿ ಖಂಡಿಸಿದ್ದಾರೆ.

(ಈ) **ಅಭಿನವಗಧಾ:**– ಇಲ್ಲಿ ಒಟ್ಟು ಆರು ಯುದ್ಧ, ಆರು ಗಧಾಪ್ರಹಾರಗಳಿವೆ. ಅಪ್ಪಯ್ಯ ದೀಕ್ಷಿತರು ರಚಿಸಿದ ಎರಡು ಕೃತಿಗಳ ಖಂಡನೆ ಇಲ್ಲಿದೆ........ ದೀಕ್ಷಿತರ ಪ್ರತಿಯೊಂದು ಆರೋಪವನ್ನು ಚೂರು ಚೂರು ಮಾಡಿದ ಕೃತಿ ಇದು.

(ಉ) **ಋಗ್‌ಭಾಷ್ಯ ಟೀಕಾ ವಿವೃತ್ತಿ**(ರೂಪಾವತಾರ):– ಋಗ್ವೇದದ 400 ಮಂತ್ರಗಳಿಗೆ **ಶ್ರೀಮಧ್ವರ ಭಾಷ್ಯ**ವಿದೆ. ಅದಕ್ಕೆ **ಜಯತೀರ್ಥರ ಟೀಕೆ** ಇದೆ. ಆ ಟೀಕೆಗೆ ಇದು ಟಿಪ್ಪಣಿಯಾಗಿದೆ.

ಪ್ರತಿಯೊಬ್ಬ ಮಾಧ್ವನು, ಶ್ರೀಸತ್ಯನಾಥರು ದ್ವೈತ ಸಾಮ್ರಾಜ್ಯದ ಗ್ರಂಥ ಭಂಡಾರಕ್ಕೆ ನೀಡಿರುವ ಕೊಡುಗೆಯನ್ನು ಹಾಗೂ ಅವರ ಕಾರ್ಯತತ್ಪರತೆಯನ್ನು ಸ್ಮರಿಸಬೇಕು. ತಮ್ಮ ಶಕ್ತಿ ಹಾಗೂ ಧೃಡ ಸಂಕಲ್ಪದಿಂದ ಅದ್ವೈತವನ್ನು ಖಂಡಿಸಲು ಯುದ್ಧವನ್ನೇ ಸಾರಿರುವುದು, ಅವರು ಅವರ ಗ್ರಂಥಗಳಿಗೆ ಪರಶು, ಅಭಿನವ ಗದಾ ಎಂದು ಹೆಸರಿಸಿರುವುದೇ ಸಾಕ್ಷಿ. "**ಅಭಿನವ ಚಂದ್ರಿಕಾ**" 12600 ಗ್ರಂಥಗಳನ್ನೊಳಗೊಂಡು ಶ್ರೀ ಸತ್ಯನಾಥರ ಮಹೋನ್ನತ ಗ್ರಂಥವಾಗಿದೆ. ಇದು, ಶ್ರೀವ್ಯಾಸತೀರ್ಥರ ಚಂದ್ರಿಕಾದ

ಮುಂದುವರೆದ ಗ್ರಂಥವಾಗದೇ, ಸ್ವತಂತ್ರ ಟಿಪ್ಪಣಿಯಾಗಿದೆ. ಶ್ರೀ ಸತ್ಯನಾಥರು ಪೂರ್ವಪಕ್ಷವನ್ನು ಹಾಗೂ ಸಿದ್ಧಾಂತವನ್ನು ಪ್ರತಿ ಅಧಿಕರಣದಲ್ಲಿ ಪ್ರತಿಪಾದಿಸಿ ತಮ್ಮ ಗುರುಗಳಾದ ಶ್ರೀಸತ್ಯನಿಧಿ ತೀರ್ಥರ ವಿಚಾರಧಾರೆಯಂತೆ ಪೂರ್ವ ಪಕ್ಷವನ್ನು ಖಂಡನೆ ಮಾಡಿದ್ದಾರೆ.

ಶ್ರೀಗಳವರು ಸಂಚಾರತ್ವೇನ ಗುರುವು ಸಿಂಹರಾಶಿಗೆ ಬಂದಾಗ ಧರ್ಮಪುರಿಗೆ ಬಂದಾಗ ಶಿಷ್ಯರಿಗೆ ಎಂದೂ ಕೇಳದಂತಹ ಅಮೋಘವಾದ ಭಾಷ್ಯದ ಪಾಠವನ್ನು ಹೇಳಿದರು. ಆ ಸಮಯದಲ್ಲಿ ಅಲ್ಲಿದ್ದ ಶ್ರೀ ಚಲಾರಿ ನರಸಿಂಹ ಚಾರ್ಯರೆಂಬ ವಿದ್ವಾಂಸರೊಂದಿಗೆ ಮಹಾಸ್ವಾಮಿಗಳು ವಾದವನ್ನು ಮಾಡಿ ಆಚಾರ್ಯರನ್ನು ನಿರುತ್ತರಗೊಳಿಸಿದರು. ಗುರುಗಳ ಆರಾಧನಾ ಕಾಲದಲ್ಲಿ ಚಲಾರಿ ನರಸಿಂಹ ಚಾರ್ಯರನ್ನು ಹಾವಿನ ಕಡಿತದಿಂದ ಪಾರುಮಾಡಿ ಅವರನ್ನು ಉಳಿಸಿಕೊಂಡರು. ಅಲ್ಲದೇ, ಮಹಾಸ್ವಾಮಿಗಳು ಆಚಾರ್ಯರನ್ನು ತಮ್ಮ ಜೊತೆಯಲ್ಲಿಯೇ ಸಂಸ್ಥಾನದಲ್ಲಿಟ್ಟುಕೊಂಡರು. ಆಚಾರ್ಯರು ಅವರ ಜೀವನ ಪರ್ಯಂತ ಸಂಸ್ಥಾನದಲ್ಲಿಯೇ ಇದ್ದರು. ಒಮ್ಮೆ ಸಾಂಗಲಿಯಲ್ಲಿ ಶ್ರೀಗಳವರು ಇರುವಾಗ ಅಲ್ಲಿಯೇ ಹತ್ತಿರದಲ್ಲಿ ಗ್ರಾಮದ ನಿವಾಸಿಗಳು ಬಂದು ತಮ್ಮ ಗ್ರಾಮದಲ್ಲಿ ನೀರಿಗೆ ಬಹಳ ಪರದಾಟವಾಗಿದೆಯೆಂದು ತಮ್ಮ ಅಳಲನ್ನು ಶ್ರೀಗಳವರಲ್ಲಿ ತೋಡಿಕೊಂಡರು. ಕರುಣೆಯ ಅಪರಾವತಾರರಾದ ಶ್ರೀಗಳವರು ಆ ಗ್ರಾಮಕ್ಕೆ ಬಿಜಯ ಮಾಡಿ ಅಲ್ಲಿ ಗ್ರಾಮಸ್ಥರಿಗೆ ಮಂತ್ರಾಕ್ಷತೆಯನ್ನು ನೀಡಿ ಎರಡು ಸ್ಥಳಗಳನ್ನು ನಿರ್ದೇಶಿಸಿ ಬಾವಿ ತೋಡಲು ಹೇಳಿದರು. ಅಲ್ಲಿ ಬಾವಿಯನ್ನು ತೋಡಲು ಒಳ್ಳೆ ತಿಳಿಯಾದ ಸಿಹಿಯಾದ ನೀರು ಸಮೃದ್ಧಿಯಾಗಿ ಬಂದಿತು. ಅಲ್ಲಿಯ ಗ್ರಾಮಸ್ಥರು ಸ್ವಾಮಿಗಳನ್ನು ಕೊಂಡಾಡಿದರು. ಸ್ವಾಮಿಗಳು ಮಠದ ವತಿಯಿಂದಲೇ ಬಾವಿಗಳನ್ನು ಕಟ್ಟಿಸಿ **''ಋಣ-ವಿಮೋಚನ ತೀರ್ಥ''**ವೆಂದು ಕರೆದರು. ಕೆಲದಿನಗಳ ಮೇಲೆ ಮಿರಜ್‌ನಲ್ಲಿ ವಾಸಿಸುತ್ತಿದ್ದ ಶ್ರೀ ಆನಂದಾಚಾರ್ಯರು ಸ್ವಾಮಿಗಳಲ್ಲಿ ಬಂದು ತಾವು ತುಂಬಾ ಕಷ್ಟದಿಂದ ಹಾಗೂ ಬಡತನದಿಂದ ನರಳುತ್ತಿರುವುದಾಗಿಯೂ ತಮ್ಮನ್ನು ಹೇಗಾದರೂ ಪಾರು ಮಾಡಬೇಕೆಂದು ಬಹುವಿಧವಾಗಿ ಬೇಡಿಕೊಂಡರು. ಶ್ರೀಗಳು ಕೃಪೆತೋರಿ ಋಣ ವಿಮೋಚನ ತೀರ್ಥದಲ್ಲಿ ಏಳು

ಭಾನುವಾರ ಸ್ನಾನ ಮಾಡುವಂತೆ ಹೇಳಿದರು. ಆಚಾರ್ಯರು ಹಾಗೇ ಮಾಡಿದ ಮೇಲೆ ಅನಿರೀಕ್ಷಿತವಾಗಿ ತಮಗೆ ಬರಬೇಕಾದ ನೂರು ಬಂಗಾರದ ನಾಣ್ಯಗಳನ್ನು ಅವರ ತಮ್ಮನು ತಂದುಕೊಟ್ಟನು. ಆಚಾರ್ಯರು ಸ್ವಾಮಿಗಳಲ್ಲಿ ಬಂದು ತಮ್ಮ ಕೃತಜ್ಞತೆಯನ್ನು ಅರ್ಪಿಸಿದರು. ಶ್ರೀಗಳವರು ಇವೆಲ್ಲವೂ **ಆ ಶ್ರೀ ಮೂಲರಾಮರ ಅನುಗ್ರಹವೆಂದು** ಹೇಳಿದರು.

ಹಾವಿನ ಕಡಿತದಿಂದ ಪಾರಾದ ನರಸಿಂಹಚಾರ್ಯರ ವಂಶವು ಪಾಂಡಿತ್ಯ, ವಿದ್ವತ್ತುಗಳಿಗೆ ಹೆಸರಾದುದು. ಶ್ರೀ ಛಲಾರಿ ನರಸಿಂಹಚಾರ್ಯರು, ಶ್ರೀ ಛಲಾರಿ ನಾರಾಯಣಚಾರ್ಯರ ಮಕ್ಕಳು. ಶ್ರೀ ನಾರಾಯಣಾಚಾರ್ಯರು ಶ್ರೀಮಠದ ಶಿಷ್ಯರು ಹಾಗೂ ಸತ್ವಶಾಲಿ ಬರಹಗಾರರಾಗಿದ್ದರು. ಅವರು ಹದಿನೈದಕ್ಕೂ ಮೇಲ್ಪಟ್ಟು ಗ್ರಂಥಗಳನ್ನು ಬರೆದಿದ್ದಾರೆಂದು ತಿಳಿದು ಬರುತ್ತದೆ. ಛಲಾರಿ ಎಂಬುದು ಅವರ ಊರಾಗಿದ್ದು, ಅದು ಮಲಖೇಡದ ಬಳಿ ಇದೆಯೆಂದು ತಿಳಿದು ಬಂದಿರುತ್ತದೆ. ಛಲಾರಿಯ ವಂಶದವರು ಶ್ರೀ ಮಠದ ಶಿಷ್ಯರಾಗಿದ್ದರೆಂಬುದು ''ಸ್ಮೃತ್ಯರ್ಥಸಾಗರ''ದಿಂದ ತಿಳಿದುಬರುತ್ತದೆ. ಅಲ್ಲದೇ, ಛಲಾರಿ ನಾರಾಯಣಾಚಾರ್ಯರ ಮೊಮ್ಮಕ್ಕಳಾದ ಶ್ರೀ ಸಂಕರ್ಷಣಾಚಾರ್ಯರು ಶ್ರೀ ಸತ್ಯನಾಥರ ಶಿಷ್ಯರಾದ ಶ್ರೀ ಸತ್ಯಾಭಿನವತೀರ್ಥರ ಸಾಕ್ಷಾತ್ ಶಿಷ್ಯರಾಗಿದ್ದರು. ಶ್ರೀ ನರಸಿಂಹಚಾರ್ಯರು, ತತ್ವಸಂಖ್ಯಾನ, ಈಶ, ಸದಾಚಾರ ಸ್ಮೃತಿ, ಪಾರಿಜಾತಾಪಹರಣ, (ನಾರಾಯಣ ಪಂಡಿತಾಚಾರ್ಯರು), ಸಮಗ್ರ ರಾಮಾಯಣ (ಅಧಿಕರಣಾರ್ಥ ಸಂಗ್ರಹ), ಬೃಹತ್ ತಾರತಮ್ಯ ಸ್ತೋತ್ರ ಮುಂತಾದವುಗಳಿಗೆ ವ್ಯಾಖ್ಯೆಯನ್ನು ಬರೆದಿದ್ದಾರೆ. ಋಗ್ಭಾಷ್ಯ ಟೀಕಾ ಹಾಗೂ ಭಾಗವತತಾತ್ಪರ್ಯ ಟೀಕಾಗಳು ಭವ್ಯ ಕೃತಿಗಳಾಗಿವೆ. ಛಲಾರಿ ಶೇಷಾಚಾರ್ಯರು ಸುಮಾರು ಹನ್ನೊಂದು ಕೃತಿಗಳನ್ನು ಬರೆದಿದ್ದಾರೆಂದು ತಿಳಿದುಬರುತ್ತದೆ. ಅನುಭಾಷ್ಯ, ತಂತ್ರಸಾರ ಸಂಗ್ರಹ, ತತ್ವಸಂಖ್ಯಾನಗಳಿಗೆ ಟಿಪ್ಪಣಿಗಳನ್ನು ಬರೆದಿದ್ದಾರೆ. ಇವರ ಮಕ್ಕಳಾದ ಶ್ರೀ ಸಂಕರ್ಷಣಾಚಾರ್ಯರು, ಶ್ರೀಜಯತೀರ್ಥರ ಜೀವನ ಚರಿತ್ರೆಯನ್ನು ಐದು ಸರ್ಗಗಳಲ್ಲಿ ಬರೆದಿದ್ದಾರೆ. ಹಾಗೂ, ಶ್ರೀ ಸತ್ಯನಾಥರ ಜೀವನ ಚರಿತ್ರೆಯನ್ನು **ಶ್ರೀ ಸತ್ಯನಾಥಾಭ್ಯುದಯ** ಹನ್ನೊಂದು ಸರ್ಗಗಳಲ್ಲಿ ಬರೆದಿದ್ದಾರೆ. ಇದು **''ಶ್ರೀ ಮಧ್ವವಿಜಯ''**ದ ಮಾದರಿಯಲ್ಲಿದೆ.

ಶ್ರೀ ಸತ್ಯನಾಥತೀರ್ಥರು ಸಂಚಾರ ಕಾಲದಲ್ಲಿ ಎಲ್ಲಡೆಯಲ್ಲಿಯೂ ವಿದ್ವತ್ಪೂರ್ಣವಾದ ಪ್ರವಚನ ಮಾಡಿದುದಲ್ಲದೇ ವಾದ ಮಾಡುವ ಕಾಲದಲ್ಲಿ ವಾದಿಗಳಿಗೆ ಆಶ್ಚರ್ಯವನ್ನುಂಟುಮಾಡುವಂತೆ ವಾದ ಮಾಡಿ ಅವರುಗಳಿಗೆ ಲಜ್ಜೆಯನ್ನುಂಟುಮಾಡುತ್ತಲಿದ್ದರು. ವಾದಿಗಳಿಗೆ ಇವರು ಸಿಂಹಸ್ವಪ್ನವಾಗಿದ್ದರು. ಕುಶಾಗ್ರಮತಿಯಾದ ಮಹಾಸ್ವಾಮಿಗಳು ತಮ್ಮ ಎದುರಾಳಿಗಳನ್ನು ತಮ್ಮ ವಾದ ಕೌಶಲ್ಯದಿಂದ ನಿರುತ್ತರಗೊಳಿಸುತ್ತಿದ್ದರು. ಅಲ್ಲದೇ, ಇವರ ವಾದಕ್ಕೆ ವಾದಿಗಳು ಆಶ್ಚರ್ಯಚಕಿತರಾಗಿ ಮೂಕ ವಿಸ್ಮಿತರಾಗುತ್ತಿದ್ದರು. ಮಹಾಮಹಿಮರಾದ ಇವರನ್ನು ನೆನಸುವುದು **ಸುಕೃತಾದಿ ಸುಕೃತ.**

ಇವರ ಪೀಳಿಗೆಯಲ್ಲಿ ಬಂದ ಶ್ರೀ ಸತ್ಯಧರ್ಮತೀರ್ಥರ ಕಾಲದಲ್ಲಿ ಅವರು ಸಂಚಾರತ್ವೇನ ಹಾವೇರಿಗೆ ಬಂದಾಗ, ಕರ್ಜಗಿಯಲ್ಲಿ ಹಂಪೆಯ ವಿರುಪಾಕ್ಷ ಮಠದ ಘನಪಂಡಿತರು ಮಧ್ವಮತ ದೂಷಕವಾದ **''ಕಲಿ ಮಹಿಮೆ''** ಎಂಬ ಗ್ರಂಥವನ್ನು ಪ್ರಚಾರ ಮಾಡುತ್ತ ''ಮಧ್ವತಂತ್ರ ಮುಖಾಮರ್ದನ'' ಎಂಬ ಪುಸ್ತಕ ಪ್ರಸಾರ ಮಾಡುತ್ತಿದ್ದರು. ತತ್‌ಕ್ಷಣವೇ ಶ್ರೀ ಸತ್ಯಧರ್ಮರು ಕರ್ಜಗಿಗೆ ಹೋಗಿ ಪಂಡಿತ ಸಭೆಯನ್ನೇರ್ಪಡಿಸಿ ವಾಕ್ಯಾರ್ಥವನ್ನು ಏರ್ಪಡಿಸಿದರು. ಅದು ಎಂಟು ದಿನಗಳವರೆಗೆ ನಡೆಯಿತು. ಆಗ ಶ್ರೀ ಸತ್ಯನಾಥರು ಬರೆದಿರುವ ''ಅಭಿನವಗಧಾ'' ಗ್ರಂಥವು ಕಲಿ ಮಹಿಮೆಯ ಒಂದೊಂದು ವಾಕ್ಯವನ್ನು ಖಂಡಿಸುತ್ತದೆ. ಅಲ್ಲದೇ, ಅಪ್ಪಯ್ಯದೀಕ್ಷಿತರ ಗ್ರಂಥವನ್ನು ಸಹ ''ಅಭಿನವಗಧಾ''ವು ಖಂಡಿಸುತ್ತದೆ ಎಂದು ಮತತ್ರಯದವರಿಂದ ಒಪ್ಪಿಸಿದರು. ಹಾಗೂ **ಶ್ರೀ ವಿಜಯಿಂದ್ರ ಸ್ವಾಮಿಗಳು** ಖಂಡಿಸಿರುವರೆಂದು ಒಪ್ಪಿಸಿದರು. ಇದು ಶ್ರೀ ಸತ್ಯನಾಥರ ಗ್ರಂಥದ ಮಹಾತ್ಮೆಯನ್ನು ಎತ್ತಿತೋರಿಸುತ್ತದೆ. ಶ್ರೀ ಸತ್ಯಧರ್ಮತೀರ್ಥರ ಗುರುಗಳ ಗುರುಗಳಾದ ಶ್ರೀ ಸತ್ಯಸಂಧರು 108 ಪ್ರಾಣದೇವರನ್ನು ಪ್ರತಿಷ್ಠಾಪನೆ ಮಾಡಿದ್ದಾರೆಂದು ಪ್ರತೀತಿ. ಇವರ ಆಶ್ರಮ ಪೂರ್ವದ ಮೊಮ್ಮಕ್ಕಳಾದ ಶ್ರೀ ಸತ್ಯ ಪರಾಯಣರು ನನ್ನ ಕುಲ ಗುರುಗಳು. ಇವರು ಶ್ರೀ ಮದುತ್ತರಾದಿ ಮಠದ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸಿದವರು.

ಶ್ರೀ ಸತ್ಯನಾಥರು ರಾಮೇಶ್ವರ ತಿರುಪತಿಗಳನ್ನು ಯಾತ್ರೆ ಮಾಡಿ ಅಲ್ಲಿಂದ ಚಂಜಿಗೆ ತೆರಳಿ ಮುಂದೆ ಶ್ರೀರಂಗಕ್ಕೆ ಹೋಗಿ ಅಲ್ಲಿ ಕೆಲವು ಕಾಲವಿದ್ದು ''ಅಭಿನವ

ಚಂದ್ರಿಕಾ'' ದಂಥ ಉತ್ಕೃಷ್ಟ ಗ್ರಂಥವನ್ನು ರಚಿಸಿದರು. ಅನ್ಯ ಮತಗಳೆಂಬ ಸಮುದ್ರವನ್ನು ಮಥನ ಮಾಡಿ ಹೊರತೆಗೆದ ''ದಿಗ್ವಿಜಯಶ್ರೀ'' ಯನ್ನು **ಶ್ರೀ ಮದಾನಂದತೀರ್ಥರ** ಸ್ವಾಮಿಯಾದ **ಶ್ರೀ ಮೂಲರಾಮದೇವರಿಗೆ** ಅರ್ಪಿಸಿದಂಥ ಯತಿವರೇಣ್ಯರು. ಅದ್ವೈತವೆಂಬ ಕಾನನವನ್ನು ತಮ್ಮ ''ಅಭಿನವಗಧಾ'' ಹಾಗೂ ''ಪರಶು'' ಎಂಬ ಕೊಡಲಿಯಿಂದ ತುಂಡರಿಸಿದರು. ಶ್ರೀಗಳವರು, ದುರ್ವಾಸ ಶ್ರೀನಿವಾಸಚಾರ್ಯರನ್ನು ಹಾಗೂ ಶ್ರೀನಿವಾಸ ಶಾಸ್ತ್ರಿಯನ್ನು ವಾಕ್ಯಾರ್ಥದಲ್ಲಿ ನಿರುತ್ತರಗೊಳಿಸಿದರು. ಅಲ್ಲದೇ, ಅಪ್ಪಯ್ಯ ಶಾಸ್ತ್ರಿಗಳನ್ನು ಪಂಡಿತ ಸಿಂಹರಾದ ಶ್ರೀಗಳವರು ವಿದ್ವತ್ಸಭೆಯಲ್ಲಿ ಪರಾಜಯಗೊಳಿಸಿದರು. ಅಲ್ಲದೇ, ಮೀಮಾಂಸಾ ಶಾಸ್ತ್ರದಲ್ಲಿ ಯಜ್ಞೇಶ್ವರಶಾಸ್ತ್ರಿಗಳನ್ನು ತಮ್ಮ ಪ್ರೌಢವಾದ ವಾಕ್ಸರಣಿಯಿಂದ ನಿರುತ್ತರನ್ನಾಗಿ ಮಾಡಿದರು. ಅಂತೆಯೇ ಒಬ್ಬ ಮಾಯಾವಾದಿಯಾದ ಶಾಸ್ತ್ರಿಗಳನ್ನು ತಮ್ಮ ವಾಕ್ ಪ್ರಹಾರದಿಂದ ಅವರನ್ನು ಪ್ರತ್ಯುತ್ತರ ತೋಚದಂತೆ ಮಾಡಿದರು. ಇವರ ವಿಜಯ ದುಂಧುಭಿಯು ಎಲ್ಲಡೆಯು ಮೊಳಗಿತು.

ಒಮ್ಮೆ ಶ್ರೀ ಸತ್ಯನಾಥರು ಚಾತುರ್ಮಾಸದಲ್ಲಿ ತಮ್ಮ ಗುರುಗಳ ಬೃಂದಾವನದ ಬಳಿ **''ಗೀತಾ ಭಾಷ್ಯ''** ಪಾಠ ಹೇಳಿದುದಲ್ಲದೇ, **''ಋಗ್ಭಾಷ್ಯ ಟೀಕಾ ವಿವೃತ್ತಿ''** ಗ್ರಂಥ ರಚಿಸಿದರು. ಮುಂದೆ, ವೇಣು ಸಾಗರಕ್ಕೆ ಶಿಷ್ಯರೊಡಗೂಡಿ ಸಮುದ್ರ ಸ್ನಾನಕ್ಕೆ ಹೋದರು. ಆಗ **ಶ್ರೀ ಹರಿಯು ವೃದ್ಧ ವಿಪ್ರನ** ರೂಪದಲ್ಲಿ ಬಂದು ಶ್ರೀ ಸತ್ಯನಾಥರ ಕೈಹಿಡಿದುಕೊಂಡು ಅಗಾಧ ವಾರಿಧಿಯನ್ನು ತೋರಿ, ಶ್ರೀಗಳವರಿಗೆ ತಾನೇ ಸ್ನಾನ ಸಂಕಲ್ಪ ಹೇಳಿ ಸ್ನಾನ ಮಾಡಿಸಿದ. ಶ್ರೀ ಸತ್ಯಾಭಿನವ ತೀರ್ಥರು ಹಾಗೂ ನೆರೆದಿದ್ದ ಜನರು ಪ್ರತ್ಯಕ್ಷವಾಗಿ ಕಂಡ ಈ ಘಟನೆಯಿಂದ ಶ್ರೀಗಳವರ ಮಹಿಮೆ ಹಾಗೂ ಶ್ರೀ ಹರಿಯ ಅನುಗ್ರಹವನ್ನು ಕಂಡು ಪುಲಕಿತರಾದರು. ಉಭಯ ಶ್ರೀಪಾದರು, ಅಲ್ಲಿಂದ ಸಪ್ತಸಾಗರಕ್ಕೆ ಬಂದರು. ಮುಂದೆ ವಶಿಷ್ಠಸಾಗರದಲ್ಲಿ ವಿದ್ಯಾಧೀಶರಿಂದ ಸಿಹಿನೀರಿನ ಭಾವಿಗಳಾಗಿದ್ದ ಉಪ್ಪುನೀರಿನ ಭಾವಿಗಳು ಕ್ರಮೇಣ ಒಣಗಿ ಹೋಗಿದ್ದವು. ಅಲ್ಲಿಯ ಜನರು ಸಿಹಿ ನೀರಿಗಾಗಿ ಪರದಾಡುವುದನ್ನು ಮನಗಂಡು, ಅಲ್ಲಿಯ ಜನರ ಪ್ರಾರ್ಥನೆಯಂತೆ ತಮ್ಮ ತಪೋಬಲದಿಂದ ನಾಲ್ಕು

ಸಿಹಿ ನೀರಿನ ಬಾವಿಗಳನ್ನು ದಯಪಾಲಿಸಿದರು. ಈ ತೀರ್ಥಗಳಿಂದಿಗೂ ಇವೆ. **(ನಿರ್ಮಿತಾಸ್ತತ್ರ ಚತ್ವಾರಃ ಕೂಪಾಸ್ತೇಷಾಮನುಜ್ಞಯಾ । ತೇ ಅದ್ಯಾಪಿ ಸಂತಿ ಸ್ವಾದೂದಕ ಸಮನ್ವಿತಾಃ ॥)**

ಶ್ರೀಗಳವರು ಬಿಜಾಪುರಕ್ಕೆ ಅಲ್ಲಿಯ ಸರದಾರ ಅನಂತ ಸಾಂಬಾಜಿಯ ಪ್ರಾರ್ಥನೆಯನ್ನು ಮನ್ನಿಸಿ ಹೋದರು. ಅವನು ಮಾಡಿದ ಅವರ ಸತ್ಕಾರ, ಭಕ್ತಿ ವಿಶ್ವಾಸ, ದಾನಧರ್ಮಗಳನ್ನು ಮೆಚ್ಚಿ **'ಪುಣ್ಯ ಶ್ಲೋಕ'** ಎಂಬ ಬಿರುದನ್ನು ದಯಪಾಲಿಸಿದರು. ಮುಂದೆ, ಆಚಾರ್ಯರಿಂದ ಪ್ರತಿಷ್ಠಿತವಾದ ಶ್ರೀಕೃಷ್ಣನ ದರ್ಶನಕ್ಕೆ ಉಡುಪಿಗೆ ಹೋಗಿ ಅಲ್ಲಿಂದ ಪಾಜಕ, ಸುಬ್ರಹ್ಮಣ್ಯ ಮಧ್ಯವಾಟ ಮುಂತಾದವುಗಳನ್ನು ಸಂದರ್ಶಿಸಿ, ವ್ಯಾಸಮುಷ್ಟಿಯನ್ನು ಪೂಜಿಸಿ, ಸಾಂಗಲಿಗೆ ಬಂದರು. ಸಾಂಗಲಿಯಲ್ಲಿ ತಮ್ಮ ಉತ್ತರಾಧಿಕಾರಿಯನ್ನು ನಿಯಮಿಸಲು ಬಯಸಿ ತಮ್ಮ ಪ್ರಿಯ ಶಿಷ್ಯರಾದ ಶ್ರೀ ನರಸಿಂಹಚಾರ್ಯರಿಗೆ ಆಶ್ರಮವನ್ನು ನೀಡಿ **ಶ್ರೀ ಸತ್ಯಾಭಿನವತೀರ್ಥರೆಂದು** ಕರೆದರು.

ಶ್ರೀಗಳವರು ತಮ್ಮ ಯೋಗದೃಷ್ಟಿಯಿಂದ ತಾವು ಶ್ರೀ ಮೂಲರಾಮನ ಪಾದಾರವಿಂದವನ್ನು ಸೇರುವ ಸಮಯ ಬಂದಿದೆಯೆಂದು ತಿಳಿದು ತಮ್ಮ ಶಿಷ್ಯರಾದ ಶ್ರೀ ಸತ್ಯಾಭಿನವತೀರ್ಥರನ್ನು ಕರೆದು ವಿಶಯವನ್ನು ತಿಳಿಸಿ, ತಾವು ತಮ್ಮ ಗುರುಗಳಾದ **ಶ್ರೀ ಸತ್ಯನಿಧಿ ತೀರ್ಥರ** ಆರಾಧನೆ ಮುಗಿಸಿ ವೃಂದಾವನ ವನ್ನು ಪ್ರವೇಶಿಸುವುದಾಗಿ ಹೇಳಿದರು. ಈಗಲೇ, ಪಾರ್ಥಿವ ಶರೀರವನ್ನು ತೊರೆದರೆ ತಮ್ಮ ಆರಾಧನೆ ಜೊತೆಯಲ್ಲಿ ಗುರುಗಳ ಆರಾಧನೆ ಸೇರಿ ಹೋಗಿ ಶ್ರೀ ಸತ್ಯನಿಧಿತೀರ್ಥರ ಆರಾಧನೆ ವೈಭವದಿಂದಾಗುವುದಿಲ್ಲವೆಂದು ಹೇಳಿದರು. ಅವರ ಆರಾದನೆಯನ್ನು ಮಾರ್ಗಶೀರ್ಷ ಶುದ್ಧ ದಶಮಿಯಂದು ಮಾಡಿ ತಾವು ಏಕಾದಶಿಯಂದು ಶ್ರೀ ಮೂಲ ರಾಮನನ್ನು ಸೇರುವುದಾಗಿ ಹೇಳಿದರು. ಅಲ್ಲದೇ, ಇವರನ್ನು ಕರೆದೊಯ್ಯಲು **ವಿಷ್ಣು ದೂತರು** ಬರಲು ತಾವು ತಮ್ಮ ಗುರುಗಳ ಆರಾಧನೆಯನ್ನು ಮುಗಿಸಿಕೊಂಡು ಬರುವುದಾಗಿ ಹೇಳಿ, ಅಂತೆಯೇ ದಶಮಿಯಂದು ಆರಾಧನೆಯನ್ನು ಮುಗಿಸಿಕೊಂಡು, ಪ್ರಯಾಣ ಮಾಡಿದ ಮಹಾಯತಿಗಳು. ಶ್ರೀ ಸತ್ಯನಾಥರು ಹೇಳಿದ್ದನ್ನು ಕೇಳಿ, ಶ್ರೀ ಸತ್ಯಾಭಿನವ ತೀರ್ಥರು ಬಹಳ ವ್ಯಾಕುಲಗೊಂಡಾಗ, ಶ್ರೀರಾಮನನ್ನು ಅನನ್ಯ ಭಜಿಸಿ. ನೀವು

ಅವನಲ್ಲಿಡುವ ವಿಶ್ವಾಸವೇ ನಿಮ್ಮನ್ನು ಕಾಪಾಡುತ್ತದೆಯೆಂದರು. ಆಗ, ಶ್ರೀ ಸತ್ಯಾಭಿನವತೀರ್ಥರು, ಸ್ವಾಮಿ, ತಮ್ಮ ಅನುಗ್ರಹದಿಂದಲೇ, ನಾನು ಬದುಕಿರುವೆನು, ಶ್ರೀರಂಗದಲ್ಲಿ ಹವೆಯ ಪ್ರತಿಕೂಲವಿರುವಾಗ ತಮ್ಮನ್ನು ಕಾಣಲು ಬಂದಾಗ ನೀವು ಅಲ್ಲಿರುವುದು ಬೇಡವೆಂದು ಹೇಳಿದಿರಿ. ಹಾಗೆ ಮಾಡದಿದ್ದರಿಂದ ವಿಚಿತ್ರರೋಗ ಬಂದಿತು.ಸಾಂಗಲಿಯಲ್ಲಿ ಮುಂದೆ ಸಂಸ್ಥಾನ ಬಂದಾಗ ಸನ್ಯಾಸವೇ ರೋಗ ಪರಿಹಾರವೆಂದು ಹೇಳಿ ಸನ್ಯಾಸವನ್ನಿತ್ತಿರಿ. ಅಂದಿನಿಂದ ಇಂದಿನವರೆಗೆ ತಮ್ಮ ಮಹಿಮೆಯಿಂದ ಯಾವ ರೋಗವಿಲ್ಲ. ಪೂರ್ವಾಶ್ರಮದಲ್ಲಿದ್ದ ರೋಗವೆಲ್ಲವು ನಾಶವಾಯಿತು. ಅಲ್ಲದೇ, ಅಲ್ಲಿಂದ ಮುಂದಕ್ಕೆ ಶಿಷ್ಯರೊಡಗೂಡಿ **ವೇದಾದ್ರಿ ನರಸಿಂಹಕ್ಕೆ** ಅಪರಾಹ್ನ ಕಾಲಕ್ಕೆ ಹೋಗಲು, ಆಹೊತ್ತಿನಲ್ಲಿ ಯಾವ ಆಹಾರ ಪದಾರ್ಥಗಳು ದೊರೆಯದಾಯಿತು. ಅಷ್ಟರಲ್ಲಿ ನದೀ ಸ್ನಾನವನ್ನಾದರೂ ಮಾಡೋಣವೆಂದು ಶಿಷ್ಯರೊಟ್ಟಿಗೆ ಹೊರಡಲು, ಒಬ್ಬರಾವುತನು ಆಹಾರ ಪದಾರ್ಥಗಳನ್ನು ತಂದಿತ್ತು ಅವುಗಳನ್ನು ನರಸಿಂಹ ದೇವರಿಗೆ ನಿವೇದನೆ ಮಾಡಬೇಕೆಂದು ಹೇಳಿದನು. ಅಂತೆಯೇ ಮಾಡಿ ಭೋಜನಕ್ಕೆ ಎಲ್ಲರೂ ಕೂಡುವ ವೇಳೆಯಲ್ಲಿ ಮಳೆಗಾಳಿ ಬರುವ ಸೂಚನೆ ತೋರಲು, ತಮ್ಮನ್ನು ಧ್ಯಾನಿಸಿ ಎಲೆಹಾಕಿ ಬಡಿಸಲು ಹೇಳಿದೆನು. ತಮ್ಮ ಅನುಗ್ರಹ ಬಲದಿಂದ ಎಲ್ಲರ ಭೋಜನವಾದ ಮೇಲೆಯೇ ಧಾರಾಕಾರವಾಗಿ ಮುಗಿಲು ಮುರಿದು ಬೀಳುವಂತೆ ಮಳೆ ಸುರಿಯಿತು. ತಮ್ಮ ಚರಣ ಸ್ಮರಣೆಯೇ, ನನಗೆ ವಿಪದ್ವಿನಾಶಕ ಎಂದರು.

ಶ್ರೀ ಸತ್ಯನಾಥರು ಮಾರ್ಗಶಿರ ಶುದ್ಧ ಏಕಾದಶಿಯಂದು ತಮ್ಮ ಯೋಗಬಲದಿಂದ ಈ ಐಹಿಕ ಪ್ರಪಂಚವನ್ನು ತೊರೆದು ಶ್ರೀ ಮೂಲರಾಮ ದೇವರಲ್ಲಿ ಸನ್ನಿಹಿತರಾದರು. ಶ್ರೀ ಸತ್ಯಾಭಿನವ ತೀರ್ಥರು **ತಮ್ಮ ಗುರುಗಳ ವೃಂದಾವನನ್ನು ದಕ್ಷಿಣ ಪಿನಾಕಿನಿ** ನದಿಯ ದಂಡೆಯ ಮೇಲೆ **ವೀರ ಚೋಳಪುರದಲ್ಲಿ** ಸ್ಥಾಪಿಸಿ ಬಹುವಿಜೃಂಭಣೆಯಿಂದ ಪಂಡಿತ ಪಾಮರಾದಿಯೆಲ್ಲರಿಗೂ ಮೃಷ್ಟಾನ್ನವನ್ನುಣಿಸಿ ಮನವನ್ನು ತಣಿಸಿದರು. ಅಲ್ಲದೇ, ದಕ್ಷಿಣೆಯನ್ನು ಸಮೃದ್ಧಿಯಾಗಿ ನೀಡಿದರು. ವೀರಚೋಳಪುರವು, ತಿರುಕೋಯಿಲೂರಿನ ಸಮೀಪದಲ್ಲಿದೆ. ಒಂದು ಐತಿಹ್ಯದಂತೆ ರುದ್ರ ದೇವರು

ತಮ್ಮ ಪತ್ನಿ ಉಮಾದೇವಿಯ ಜೊತೆ ಭೂ ಲೋಕದಲ್ಲಿ ಸಂಚರಿಸುತ್ತಿರುವಾಗ, ದೇವಿಗೆ ತೃಷೆಯುಂಟಾಗಲು ರುದ್ರ ದೇವರು ತನ್ನ ಪಿನಾಕದಿಂದ ಭೂಮಿಯನ್ನು ಘಟ್ಟಿಸಲು, ತಕ್ಷಣವೇ ಜಲೋದ್ಭವವಾಯಿತು. ಆಗ ಉಮಾದೇವಿಯು ತನ್ನದಾಹವನ್ನು ಹಿಂಗಿಸಿಕೊಂಡಳು. ಹೀಗೆ ಉದ್ಭವವಾದ ಜಲವು ಉತ್ತರಾಭಿಮುಖವಾಗಿಯು, ದಕ್ಷಿಣಾಭಿಮುಖವಾಗಿ ಹರಿಯಿತು. ದಕ್ಷಿಣಾಭಿಮುಖವಾಗಿ ಹರಿದ ಜಲವು ನದಿಯಾಗಿ ಹರಿದು **ದಕ್ಷಿಣ ಪಿನಾಕಿನಿ** ಎಂದು ಪ್ರಸಿದ್ಧಿಯಾಯಿತು. ಅಂತೆಯೇ, ಉತ್ತರಾಭಿಮುಖವಾಗಿ ಹರಿದ ಜಲವು ನದಿಯಾಗಿ ಉತ್ತರ ಪಿನಾಕಿನಿಯೆಂದು ಹೆಸರಾಯಿತು. ಶ್ರೀ ಜಗನ್ನಾಥದಾಸರು ತಮ್ಮ ಭಾಗೀರಥ್ಯಾದಿಗಳ ತಾರತಮ್ಯದಲ್ಲಿ:–

ಭೀಮರಥಿ ಸಮ ಪಿನಾಕಿನಿಯೊಳಗೆ ಕೇಶವನು...... ಸ್ವಾಮಿಯೆನಿಸುವನಲ್ಲಿ ಸ್ನಾನಾದಿ ಸತ್ಕರ್ಮ, ಧೀಮಂತರಾಚರಿಸೆ ಪ್ರತಿದಿನದಿ ಧರ್ಮಾರ್ಥ ಕಾಮ ಮೋಕ್ಷಗಳೀವನು ಎಂದು ಪಿನಾಕಿನಿಯನ್ನು ವರ್ಣಿಸಿದ್ದಾರೆ. ಈ ನದಿ ದಂಡೆಯ ಮೇಲೆಯೇ ವೀರಚೋಳಪುರಕ್ಕೆ ಸನ್ನಿಹದಲ್ಲಿಯೆ ತಿರುಕೋಯಿಲೂರಿದೆ. **ಇಲ್ಲಿ ಮಹಾನುಭಾವರಾದ ಶ್ರೀ ರಘೋತ್ತಮ ತೀರ್ಥರ ವೃಂದಾವನವಿದೆ.** ವೃಂದಾವನದ ಮೇಲ್ಭಾಗದಲ್ಲಿ ಮೂರು ದಳಗಳಿವೆ. ಮಧ್ಯ ದಳದಲ್ಲಿ ಬಲಹಸ್ತದಲ್ಲಿ ಕಮಂಡಲ, ಎಡಹಸ್ತದಲ್ಲಿ ದಂಡ, ಕೌಪೀನ ಧರಿಸಿ ನಿಂತಿರುವ ಭಂಗಿಯಲ್ಲಿ ಶ್ರೀ ಗಳವರ ಸುಂದರವಾದ ದಿವ್ಯ ಪ್ರತಿಮೆ ಇದೆ. ಹಿಂದೆ, ಪ್ರತಿಮಯಿದ್ದ ದಳಕ್ಕೆ ಮಾತ್ರ ಗಂಧಾಕ್ಷತೆ ಹಾಗೂ ಅಲಂಕಾರಗಳಿಂದ ಪೂಜೆ ಮಾಡುತ್ತಿತ್ತು. ಮಹಾಸ್ವಾಮಿಗಳು ಒಮ್ಮೆ ಸ್ವಪ್ನದಲ್ಲಿ ಕಾಣಿಸಿಕೊಂಡು ವೃಂದಾವನದ ಮತ್ತೊಂದು ಪಾರ್ಶ್ವದಲ್ಲಿಯೂ ಪೂಜೆಮಾಡಲು ಅಪ್ಪಣೆ ಮಾಡಿದರು. **ಆ ದಿಕ್ಕಿನಲ್ಲಿರುವ ವೀರ ಚೋಳಪುರದಿಂದ ಶ್ರೀ ಸತ್ಯನಾಥರು ತಮ್ಮಲ್ಲಿ ಅಧ್ಯಯನಕ್ಕೆ** ಬರುವುದರಿಂದ ಪೂಜೆ ಮಾಡುವಂತೆ ಅಪ್ಪಣೆಯಾಯಿತು. ಇವತ್ತಿಗೂ ಅವರ ಅಪ್ಪಣೆಯಂತೆ ಪೂಜೆ ನಡೆಯುತ್ತಲಿದೆ. ರಘೋತ್ತಮರ ವೃಂದಾವನ ಬೃಹದಾಕಾರವಾಗಿದೆ. ಇವರ ಸನ್ನಿಹದಲ್ಲಿಯೇ ಪ್ರಾತಃ ಸ್ಮರಣೀಯರಾದ **ಶ್ರೀ ಸತ್ಯಪ್ರಮೋದ ತೀರ್ಥರ** ವೃಂದಾವನವಿದೆ. ಎಲ್ಲರಿಗೂ ತಿರುಕೋಯಿಲೂರಿಗೆ

ಹೋಗಲು ಕಷ್ಟ ಸಾಧ್ಯವೆಂದು ಯೋಚಿಸಿ **ಶ್ರೀ ಸತ್ಯ ಪ್ರಮೋದತೀರ್ಥರು** ತಮ್ಮ ಕಾಲದಲ್ಲಿ ಬೆಂಗಳೂರು ಶ್ರೀ ಮುದುತ್ತರಾದಿ ಮಠದಲ್ಲಿ **ಶ್ರೀ ರಘೋತ್ತಮತೀರ್ಥರ** ದಿವ್ಯವೃಂದಾವನವನ್ನು ಪ್ರತಿಷ್ಠಾಪಿಸಿದ್ದಾರೆ. ಇಲ್ಲಿ **ಶ್ರೀ ಸತ್ಯನಾಥರ ಪ್ರತಿಮೆಯು** ಇದೆ. ಅಲ್ಲದೇ **ಶ್ರೀ ಜಯತೀರ್ಥರ ವೃಂದಾವನ** ಹಾಗೂ **ಶ್ರೀ ಸತ್ಯಧ್ಯಾನರ ವೃಂದಾವನವನ್ನು** ಪ್ರತಿಷ್ಠಾಪಿಸಲಾಗಿದೆ.

ವೀರಚೋಳಪುರದಲ್ಲಿರುವ ಶ್ರೀ ಸತ್ಯನಾಥರ ವೃಂದಾವನವು ಬಹಳ ಚೆನ್ನಾಗಿದೆ. ಶ್ರೀ ಸತ್ಯನಾಥರನ್ನು **ಸೇವೆಗೈದು ಬರಿಗೈಯಲ್ಲಿ ಬಂದವರಿಲ್ಲ. ಭೂಮಿಯೊಳು ಶ್ರೀ ಸತ್ಯನಾಥರಂಥ ಯತಿವರೇಣ್ಯರಿಲ್ಲ.** ಅವರನ್ನು ತದೇಕ ಮನಸ್ಸಿನಿಂದ ಸೇವೆ ಮಾಡುವುದರಿಂದ ಹಾಗೂ ಅವರ ಪೂಜೆ ಮಾಡುವುದರಿಂದ ಸಕಲ ದುರಿತಗಳು ನಿವಾರಣೆಯಾಗುವುವು. ಪುತ್ರಾರ್ಥಿಗಳಿಗೆ ಸತ್ಪುತ್ರರು, ಅರ್ಥಾಪೇಕ್ಷಿತರಿಗೆ ಅರ್ಥವು, ಮನೋಕಾಮನಾರ್ಥಿಗಳಿಗೆ ಅವರ ಇಷ್ಟಪ್ರಾಪ್ತಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ವೀರಚೋಳಪುರಕ್ಕೆ, ತಿರುಕೋಯಿಲೂರಿನಿಂದ 20ಕಿ.ಮೀ. ಬಸ್, ಆಟೋಗಳಲ್ಲಿ ಹೋಗಬಹುದು. ಅರ್ಚಕರಾದ ಶ್ರೀವಾದಿರಾಜಾಚಾರ್ಯರಿಗೆ 9362931753 ದೂರವಾಣಿ ಕರೆ ಮುಂಚಿತವಾಗಿ ಮಾಡಿದರೆ ಸೇವೆ ಸೌಲಭ್ಯ, ಊಟದ ವ್ಯವಸ್ಥೆ ಕಲ್ಪಿಸುತ್ತಾರೆ. **ಶ್ರೀ ಸತ್ಯನಾಥರೆಂದರೆ ಭವ ಭಯ ನಿವಾರಕರು. ನಿತ್ಯದಲ್ಲಿ ಇವರ ನಾಮವನ್ನು ಪಠಿಸುವವರಿಗೆ ಇಷ್ಟಾರ್ಥಗಳು ಹಾಗೂ ಸಕಲೇಶ್ವರ್ಯವು ದೊರಕುವುದರಲ್ಲಿ ಯಾವುದೇ ಸಂಶಯವಿಲ್ಲ.**

ಸತ್ಯನಾಥ ಗುರುಃ ಪಾತುಯೋಧೀರೋ ನವ ಚಂದ್ರಿಕಾಮ್
ನವಾಮೃತ ಗದಾತೀರ್ಥತಾಂಡಾವಾನಿ ವ್ಯಚೀಕ್ಲೃಪತ್

(ಶ್ರೀ ಸತ್ಯಾಭಿನವತೀರ್ಥ ಕೃತಚರಮ ಶ್ಲೋಕ)

ಪಾಹಿಸತ್ಯನಾಥ ಪಾಹಿ ಸತ್ಯನಾಥ ಪಾಹಿ ಸತ್ಯನಾಥ
ಸತ್ಯನಾಥರನ್ನು ಸ್ಮರಿಸಿರೋ ಸನ್ಮತಿಯನ್ನು ಪಡೆಯಿರೋ.

ಶ್ರೀಮೂಲರಾಮೋ ವಿಜಯತೇ

ಸತ್ಯಸಂತುಷ್ಟವಾರಾಶೇಃ ಜಾತಃ ಸತ್ಯಪರಾಯಣಃ ।
ಚಿಂತಾಮಣಿ ಸದಾ ಭೂಯಾತ್ ಸತಾಂಚಿಂತಿತಸಿದ್ಧಯೇ ॥

ಕುಲಗುರು ಶ್ರೀ ಸತ್ಯಪರಾಯಣತೀರ್ಥರ ಪಾದಾರವಿಂದಗಳಲ್ಲಿ
ಅರ್ಪಿತವೀ ಕೃತಿಪುಷ್ಪ

ನನ್ನ ಜನುಮದಾತ
ಶ್ರೀ ಸತ್ಯಪರಾಯಯಣತೀರ್ಥರ
ವಂಶಜಾತ
ಶ್ರೀ ಎಸ್.ಬಿ. ಕೃಷ್ಣಮೂರ್ತಿ

ಹಾಗೂ ತಾಯಿ
ಶ್ರೀಮತಿ ಎಸ್.ಕೆ. ಸುಶೀಲಾಬಾಯಿ
ಚರಣಾರವಿಂದಗಳಿಗೆ
ನನ್ನ ನಮನಗಳು

ಎಸ್. ಕೆ. ಬದರೀನಾಥ್
(ಸದರಮಿನ್)